Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13.
RNI No. KARBIL - 2004/18001. Pages 20

## ವ್ಯಕ್ತಿ ಪರಿಚಯ – ಶ್ರೀ ಎನ್. ಜಿ. ಈಶ್ವರಪ್ಪ

ವ್ಯಕ್ತಿ ತಾನು ಕೈಗೊಂಡ ಗುರಿ ಸಾಧಿಸುವ ಕಾರ್ಯದಲ್ಲಿ ಯಶಸ್ಸು ಕಾಣಲು ಹಾತೊರೆಯುತ್ತಾನೆ. ಹಾಗೂ ಒಬ್ಬ ಯಶಸ್ವಿ ವ್ಯಕ್ತಿಯು ಗುರಿ ಸಾಧಿಸುವುದು ತನ್ನ ಕರ್ತವ್ಯವೆಂದು ತಿಳಿಯುವುದು ಸಹಜ, ತಾನು ಹಿಡಿದ ಕೆಲಸವನ್ನು ಮಾಡಿ ಮುಗಿಸಿ ಯಶಸ್ಸು ಕಾಣಲು ಎಷ್ಟು ಅಡ್ಡಿ ಆತಂಕಗಳೊಂದಿಗೆ ಸಮಸ್ಯೆಗಳೊಂದಿಗೆ ತಾನು ಎಷ್ಟರ ಮಟ್ಟಿಗೆ ಯತ್ನಿಸುತ್ತಿದ್ದೇನೆ ಎಂಬುದನ್ನು ತಿಳಿಯಲು ತನಗೆ ತಾನೇ ಪರಾಮರ್ಶೆ ಮಾಡುವುದು ಅತ್ಯಗತ್ಯ. ಪ್ರತಿಯೊಂದು ಸಮಸ್ಯೆಯನ್ನು ಸಮರ್ಥನೀಯವಾಗಿ ಎದುರಿಸಿ ತಮ್ಮ ಸಾಧನೆಯಲ್ಲಿ ಯಶಸ್ಸನ್ನು ಕಂಡ ವ್ಯಕ್ತಿ ಇಂದು ನಮ್ಮೊಂದಿಗೆ, ಅವರೇ ಶ್ರೀ ಎನ್ ಜಿ ಈಶ್ವರಪ್ಪ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ನಳ್ಳಿನಕೊಪ್ಪ ಗ್ರಾಮದ ಗ್ರಾಮದಲ್ಲಿ ಎನ್.ಜಿ. ಈಶ್ವರಪ್ಪನವರು 1936ರಂದು ಜನಸಿದರು. ಶಿಕಾರಿಪುರದ ಮುನ್ಸಿಪಲ್ ಹೈಸ್ಕೂಲ್‌ನಲ್ಲಿ ಓದಿ ಎಸ್.ಎಸ್.ಎಲ್.ಸಿ ಪ್ರಥಮ ಸ್ಥಾನವನ್ನು ಗಳಿಸಿದ ಹೆಗ್ಗಳಿಕೆ. ತಂದೆ ದಿ. ಶ್ರೀ ಸಿದ್ಧಲಿಂಗಪ್ಪಗೌಡರವರು ಹಾಗೂ ತಾಯಿ ಶ್ರೀಮತಿ ನಾಗಮ್ಮನವರು. ಶ್ರೀಯುತರು ಮೂಲತಃ ಕೃಷಿಕರು. ತಮಗೆ ಸಿಕ್ಕ ಚಿಕ್ಕ ಭೂಮಿಯನ್ನೆ ಅಭಿವೃದ್ದಿಪಡಿಸಿ ಅದರಲ್ಲಿ ಉತ್ತಮ ಬೆಳೆಯನ್ನು ತೆಗೆದು ಅಧಿಕ ಭೂಮಿಯನ್ನು ಖರೀದಿಸಿ ವ್ಯವಸಾಯದಲ್ಲಿ ಗೆಲುವನ್ನು ಕಂಡವರು. ಇವರ ಸಾಧನೆಗಳ ಹಿಂದೆ ಇವರ ಧರ್ಮಪತ್ನಿ ಶ್ರೀಮತಿ ಅನುಸೂಯಮ್ಮನವರು ಸಾತ್ ನೀಡಿದ್ದಾರೆ. ಆ ಪುಟ್ಟ ಗ್ರಾಮದಲ್ಲಿ ಒಂದು ಪ್ರಾಥಮಿಕ ಹಾಲು ಉತ್ಪಾದಕ ಸಹಕಾರ ಸಂಘವನ್ನು ತೆರೆಯುವಲ್ಲಿ ಶ್ರೀಯುತರ ಪಾತ್ರ ತುಂಬಾ ಹಿರಿದಾದದ್ದು. ಇವರು ಈ ಸಹಕಾರಿ ಸಂಘದಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದವರು. ಈ ಸಂಘದಿಂದಾಗಿ ಹಳ್ಳಿಯಲ್ಲಿ ಮಹಿಳೆಯರು ಸ್ವಾವಲಂಬಿಗಳಾಗಲು ಸಹಾಯಕವಾಗಿದೆ. ಹಳ್ಳಿಯ ಬಹಳಷ್ಟು ಜನರು ಹೈನುಗಾರಿಕೆಯನ್ನೆ ಅವಲಂಬಿಸಿ ಇಂದು ಜೀವನ ನಡೆಸುತ್ತಿದ್ದಾರೆ.

ಶ್ರೀಯುತರು TAPCMSನ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವಾಗ ರೈತರಿಗೆ ತಮ್ಮ ಬೆಳೆದ ಬೆಳೆಗಳನ್ನು ಸಂಗ್ರಹಿಸಲು ಗೋಡಾನ್‌ಗಳನ್ನು ಕಟ್ಟಿಸಿ ಎಲ್ಲಾ ರೈತರಿಗೂ ಅನುಕೂಲವಾಗುವಂತೆ ಮಾಡಿದ ಹೆಗ್ಗಳಿಗೆ ಇವರದು. ಶಿಕಾರಿಪುರದ ಸಹಕಾರ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಲ್ಲಿ 1980ರಲ್ಲಿ ನಿರ್ದೇಶಕರಾಗಿ ಸೇವೆಸಲ್ಲಿಸಿದ್ದಾರೆ. ರೈತರಿಗೆ ಸಾಲಗಳಲ್ಲಿ ಸಬ್ಸಿಡಿ ನೀಡಲು ನೆರವಾಗಿದ್ದಾರೆ. ಶ್ರೀಯುತರು ತಮ್ಮ ಗ್ರಾಮದ ಬಸವೇಶ್ವರ ದೇವಸ್ಥಾನವಾದ ಸಮಿತಿಯಲ್ಲಿ ಅಧ್ಯಕ್ಷರಾಗಿ, ಖಜಾಂಜಿಯಾಗಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಗಳನ್ನು ಮಾಡಿರುತ್ತಾರೆ.

ದಯಾಳುಗಳಾದ ಶ್ರೀಯುತರು ಹತ್ತಾರು ಹಳ್ಳಿಗಳ ಸಾಮಾಜಿಕ ಸೇವೆಯನ್ನು ಮಾಡುತ್ತಿದ್ದಾರೆ. ಹಳ್ಳಿಯಲ್ಲಿ ಕಷ್ಟ ಎಂದವರಿಗೆ ಸಹಾಯ ಹಸ್ತ ನೀಡಿದ್ದಾರೆ. ಅನೇಕರಿಗೆ ದಾರಿ ದೀಪವಾಗುವ ಕೆಲಸಗಳನ್ನು ಮಾಡಲು ಮಾರ್ಗದರ್ಶನ ಮಾಡಿದ್ದಾರೆ. ಹಳ್ಳಿಯಲ್ಲಿ ಸೂಕ್ತ ಶಿಕ್ಷಣ ವ್ಯವಸ್ತೆ ಒದಗಿಸಲು ಶ್ರಮಿಸಿ ಸರ್ಕಾರಿ ಪ್ರೌಢಶಾಲೆಯನ್ನು ಮಂಜೂರು ಮಾಡಿಸಿದ್ದಾರೆ. ಈ ಮೂಲಕ ಸುತ್ತ ಮುತ್ತಲಿನ ಹತ್ತಾರು ಹಳ್ಳಿಯ ಮಕ್ಕಳು ಉತ್ತಮ ಶಿಕ್ಷಣ ಪಡೆಯಲು ಕಾರಣರಾಗಿರುತ್ತಾರೆ. 77ರ ವಯೋಮಾನದ ಕ್ರಿಯಾಶೀಲರಾದ ಶ್ರೀಯುತರು 1970 ರಿಂದ–80ರವರೆಗೆ VSSN ಸಹಕಾರಿ ಸಂಘದ ಅಧ್ಯಕ್ಷರಾಗಿ, ಗೌರವ ಕಾರ್ಯದರ್ಶಿಗಳಾಗಿ ಉತ್ತಮ ಸೇವೆಸಲ್ಲಿಸಿದ್ದಾರೆ. ಪ್ರಸ್ತುತ ಹಾಲಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**– ಶ್ರೀಮತಿ ಅನಿತಾ ಸುಭಾಷ್, ಸಿರಾಳಕೊಪ್ಪ**

**LEADER OF LEADERS - KARNATAKA STATE SOUHARDA FEDERAL CO-OP-LTD BANGALORE**

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತೀಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ಸಹ ಪ್ರಧಾನ ವ್ಯವಸ್ಥಾಪಕ | ಶ್ರೀಮತಿ ಕೃತಿ ಜನಾರ್ಧನ್ | 9900244207 |
| ಸಹ ಪ್ರಧಾನ ವ್ಯವಸ್ಥಾಪಕ | ಶ್ರೀ ಶ್ರೀಕಾಂತ | 9916814888 |
| ತರಬೇತಿ ಅಧಿಕಾರಿ | ಶ್ರೀ ವಿ.ಜೆ. ಕಾರಕೂನ | 9482734077 |
| ಬೆಂಗಳೂರು ವಿಭಾಗಾಧಿಕಾರಿ | ಶ್ರೀ ರಘುನಂದನ್ ಕೆ. | 9481036592 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |
| ಗುಲ್ಬರ್ಗಾ ವಿಭಾಗಾಧಿಕಾರಿ | ಶ್ರೀ ಸಂಜಯ ಕೋರಟಕರ | 9900990268 |
| ಮೈಸೂರು ವಿಭಾಗಾಧಿಕಾರಿ | ಶ್ರೀ ಶಿವಕುಮಾರ ಬಿರಾದಾರ | 9844454995 |

ಇವರಿಂದ ಪ್ರಕಟಿತ :
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 10.
web : www.souharda.coop,
E-mail : souharda@souharda.coop,
**ದೂ.ಸಂ :** 23378375/76/77/78/79/80 & 23474408, 23573291
ಸಂಪಾದಕ, ಪ್ರಕಾಶಕ : **ಶರಣಗೌಡ ಜಿ. ಪಾಟೀಲ**
ಸಂಚಿಕೆ ಸಿದ್ಧತೆ : **ವಿ.ಜೆ.ಕಾರಕೂನ**
ಮುದ್ರಣ : **ವರ್ಣ ಕಮ್ಯುನಿಕೇಷನ್ಸ್**, ಬೆಂಗಳೂರು.

**ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ :** ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1, ದೂ. 0831–2401551
**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ಗುಲ್ಬರ್ಗಾ ನಂ 1–4/3 ಎ ಸಂಜಿವರಾವ್ ಬಡಾವಣೆ,
ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222, ಮೊ. 9900990268.

Edited, Printed and Published by Sharan Gouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010



# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Volume - 11 Issue - 6 Swabhimani Sahakari Monthly Pages - 20 ₹ - 12 June 2013






ನೂತನ ವಿಧಾನಸಭೆಯ ಸದಸ್ಯರು ಹಾಗೂ ಐಟಿ ಬಿಟಿ ಕಂಪನಿಗಳ ಸಚಿವರಾದ ಶ್ರೀ ಎಸ್.ಆರ್ ಪಾಟೀಲ್ ಅವರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಸತೀಶ್‌ಚಂದ್ರ ಹಾಗೂ ನಿರ್ದೇಶಕರಾದ ಶ್ರೀ ಕೃಷ್ಣಾರೆಡ್ಡಿ ಅವರು ಸಂಯುಕ್ತ ಸಹಕಾರಿಯ ಪರವಾಗಿ ಅಭಿನಂದಿಸಿದರು.



ಶ್ರೀ ಹೆಚ್.ಕೆ ಪಾಟೀಲ್‌ರವರು ಗ್ರಾಮೀಣಾಭಿವೃದ್ಧಿ ಮತಯ್ತು ಪಂಚಾಯತ್ ರಾಜ್ ಸಚಿವರಿಗಿರುವುದಕ್ಕೆ ಹಾಗೂ ಶ್ರೀ ಹೆಚ್.ಸಿ. ಮಹದೇವ ಖಾತೆ ಸಚಿವರಾಗಿ ಆಯ್ಕೆಯಾದ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಸತೀಶ್‌ಚಂದ್ರರವರು ಅಭಿನಂದಿಸುತ್ತಿದ್ದಾರೆ..

**ಸೌಹಾರ್ದ ಸಹಕಾರಿಗಳ ಸಂಖ್ಯೆ : 2447 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 502**



ಅಧ್ಯಕ್ಷರ ಮಾತು

ಅನೇಕ ನ್ಯೂನತೆಗಳ ಮಧ್ಯೆಯೂ ಪ್ರಜಾಪ್ರಭುತ್ವದ ಆಡಳಿತವೇ ಉತ್ತಮ ಆಡಳಿತ ವ್ಯವಸ್ಥೆಯೆಂಬ ಸತ್ಯ. ಸಹಕಾರಿ ನಾಯಕತ್ವವು ಸಹಕಾರಿ ತತ್ವಗಳನ್ನು, ಸಹಕಾರಿ ಕ್ಷೇತ್ರದ ಸಾಧನೆಗಳನ್ನು, ಪ್ರಚಲಿತ ವಿದ್ಯಮಾನಗಳನ್ನು, ಸಹಕಾರಿ ಸಂಸ್ಥೆಯ ಉದ್ದೇಶಗಳನ್ನು ಆಡಳಿತ ತತ್ವಗಳನ್ನು ಮತ್ತು ಆಡಳಿತದ ವಿವಿಧ ಆಯಾಮಗಳ ಬಗ್ಗೆ ತಿಳಿದುಕೊಂಡು ಕಾರ್ಯನಿರ್ವಹಿಸಿದಾಗ ಪರಿಪೂರ್ಣವೆನಿಸುತ್ತದೆ.

# ಸಹಕಾರಿ ನಾಯಕತ್ವ ಹಾಗೂ ಆಡಳಿತ

ಉತ್ತಮ ಆಡಳಿತ ಸಹಕಾರಿ ಸಂಸ್ಥೆಯ ಯಶಸ್ಸಿನ ತಳಹದಿ. ಒಂದು ಸಂಸ್ಥೆ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎನ್ನುವುದಾದರೆ ಆಡಳಿತದ ಎಲ್ಲ ವಿಭಾಗಗಳು ಚೆನ್ನಾಗಿ ಕಾರ್ಯನಿರ್ವಹಿಸುತ್ತಿವೆ, ಉತ್ತಮ ನಾಯಕತ್ವವಿದೆ ಎಂದು ಅರ್ಥೈಸಬಹುದು. ಉತ್ತಮ ನಾಯಕತ್ವ ಹಾಗೂ ಆಡಳಿತ ಪರಿಣಿತಿ ಸಹಕಾರ ಕ್ಷೇತ್ರದಲ್ಲಿ ಇಂದಿನ ಅವಶ್ಯಕತೆ. ಪ್ರಜಾಪ್ರಭುತ್ವದ ತಳಹದಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಕ್ಷೇತ್ರದ ಆಡಳಿತ ಚುಕ್ಕಾಣಿ ಹಿಡಿಯುವ ಪ್ರತಿನಿಧಿಗಳಿಗೆ ಸಹಕಾರಿಯ ನಿರ್ದೇಶಕರಾಗಲು ಯಾವುದೆ ಶೈಕ್ಷಣಿಕ ಅಥವಾ ಆಡಳಿತದ ಪೂರ್ವಾನುಭವದ ನಿಬಂಧನೆಗಳಿರುವುದಿಲ್ಲವಾದರೂ ಒಂದು ಬಾರಿ ನಿರ್ದೇಶಕರಾಗಿ ಬಂದ ಮೇಲೆ ಆಡಳಿತದಲ್ಲಿ ಅನುಭವವು ಸಿಗುವ ಹಾಗೆ ಪರಿಣಿತಿಯನ್ನು ಹೊಂದುವ ಹಾಗೆ ಉತ್ತಮ ಸಹಕಾರಿ ನಾಯಕರಾಗಿ ಹೊರ ಹೊಮ್ಮುವ ವ್ಯವಸ್ಥೆ ಮಾಡುವುದು ಸಹಕಾರಿ ಸಂಸ್ಥೆಯ ಪ್ರಥಮ ಕರ್ತವ್ಯವೆಂದು ನನ್ನ ಭಾವನೆ.

ಸಹಕಾರಿಯ ನಿರ್ದೇಶಕರು ಅಥವಾ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸಲು ಅಪೇಕ್ಷಿಸುವವರು. ಸಹಕಾರಿ ನಾಯಕತ್ವವಹಿಸಿಕೊಳ್ಳುವವರು ತಿಳಿದುಕೊಳ್ಳಬೇಕಾದ ಮಹತ್ವದ ವಿಷಯವೇನೆಂದರೆ ಅನೇಕ ನ್ಯೂನತೆಗಳ ಮಧ್ಯೆಯೂ ಪ್ರಜಾಪ್ರಭುತ್ವದ ಆಡಳಿತವೇ ಉತ್ತಮ ಆಡಳಿತ ವ್ಯವಸ್ಥೆಯೆಂಬ ಸತ್ಯ. ಸಹಕಾರಿ ನಾಯಕತ್ವವು ಸಹಕಾರಿ ತತ್ವಗಳನ್ನು, ಸಹಕಾರಿ ಕ್ಷೇತ್ರದ ಸಾಧನೆಗಳನ್ನು, ಪ್ರಚಲಿತ ವಿದ್ಯಮಾನಗಳನ್ನು, ಸಹಕಾರಿ ಸಂಸ್ಥೆಯ ಉದ್ದೇಶಗಳನ್ನು ಆಡಳಿತ ತತ್ವಗಳನ್ನು ಮತ್ತು ಆಡಳಿತದ ವಿವಿಧ ಆಯಾಮಗಳ ಬಗ್ಗೆ ತಿಳಿದುಕೊಂಡು ಕಾರ್ಯನಿರ್ವಹಿಸಿದಾಗ ಪರಿಪೂರ್ಣವೆನಿಸುತ್ತದೆ. ಉತ್ತಮ ಆಡಳಿತ ನಿರ್ವಹಣೆ ಸಾಧ್ಯವಾಗುತ್ತದೆ. ಸಹಕಾರಿಯ ಪ್ರಗತಿ ನಿರೀಕ್ಷಿತ ಮಟ್ಟದ್ದಾಗುತ್ತದೆ.

ಸಹಕಾರಿ ನಾಯಕತ್ವ ವಹಿಸಿಕೊಂಡಿರುವ ಆಡಳಿತ ಮಂಡಳಿಯವರು ಸಹಕಾರಿ ಅಭಿವೃದ್ಧಿಗಾಗಿ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿದ ಎಲ್ಲ ವಿಷಯಗಳನ್ನು ಜಾರಿಗೊಳಿಸುವ ಹಾಗೂ ನೀತಿ ರೂಪಿಸುವ ಅಧಿಕಾರವನ್ನು ಹೊಂದಿದವರಾಗಿರುತ್ತಾರೆ. ಆದ್ದರಿಂದ ಸಂಸ್ಥೆಯ ಉದ್ದೇಶಗಳ ಸಾಫಲ್ಯಕ್ಕಾಗಿ ಸಂಪನ್ಮೂಲಗಳ ಕ್ರೂಢೀಕರಣ, ಹಣಕಾಸು ನಿರ್ವಹಣೆಯ ಹಾಗೂ ಸಂಸ್ಥೆಯ ವ್ಯವಹಾರಗಳ ನಿರ್ವಹಣೆಗಾಗಿ ಸೂಕ್ತ ಮಾರ್ಗದರ್ಶನ, ಸಿಬ್ಬಂದಿಯವರಿಗೆ ಮಾರ್ಗದರ್ಶನ, ಆಂತರಿಕ ಸಂಬಂಧಗಳ ಉತ್ತಮ ನಿರ್ವಹಣೆ, ಸದಸ್ಯರ ಹಾಗೂ ಗ್ರಾಹಕರ ಹಿತರಕ್ಷಣೆಯ ಮಾರ್ಗೋಪಾಯಗಳನ್ನು ರೂಪಿಸುವುದು, ಕಾರ್ಯರೂಪಕ್ಕೆ ತರುವುದು, ಆಂತರಿಕ ಶಿಸ್ತು ನಿರ್ವಹಣೆಗೆ ಮಹತ್ವ, ಕಛೇರಿ ಆಡಳಿತ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡುವುದು, ಸಮಯ ಪಾಲನೆಗೆ ಮಹತ್ವ ನೀಡುವುದು, ಸಮಾನತೆಯ ತಳಹದಿಯಲ್ಲಿ ಸಂಘಭಾವನೆಯಿಂದ ಒಗ್ಗಟ್ಟಿನಿಂದ ಒಮ್ಮತದಿಂದ ಏಕಭಾವದಿಂದ ಕಾರ್ಯಾಚರಣೆ ಮಾಡಿದಾಗ ಸಹಕಾರಿಯ ಪ್ರಗತಿಯಾಗುತ್ತದೆ. ಆಡಳಿತದಲ್ಲಿ ಪಕ್ವತೆ ಕಾಣಿಸುತ್ತದೆ. ನಾಯಕತ್ವಕ್ಕೆ ಮೆರಗು ಬರುತ್ತದೆ. ನಿರಂತರ ಅಧ್ಯಯನ, ಹೊಸತನವನ್ನು ಅಧ್ಯಯನ ಮಾಡುವುದು, ಪ್ರಚಲಿತ ವಿದ್ಯಮಾನಗಳನ್ನು ತಿಳಿದುಕೊಳ್ಳುವುದು, ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯನಿರ್ವಹಿಸುವ ಸಹಕಾರಿ ನಾಯಕತ್ವದ ಲಕ್ಷಣಗಳನ್ನು ರೂಢಿಸಿಕೊಳ್ಳುವುದು ಅವಶ್ಯಕ.

ಆಡಳಿತದಲ್ಲಿ ರಾಜಕೀಯವನ್ನು ಬೆರೆಸುವಿಕೆ, ಸ್ವಹಿತ ಸಾಧನೆ, ಪ್ರಾದೇಶಿಕ, ಜಾತಿಯ ಹಾಗೂ ಮತೀಯ ಭ್ರಾಂತಿತನದಿಂದ ಆಡಳಿತದಲ್ಲಿ ಹಿನ್ನಡೆಯಾಗುತ್ತದೆ ಎಂಬುದನ್ನು ಗಮನದಲ್ಲಿಟ್ಟು ಸಹಕಾರಿ ತತ್ವಗಳಲ್ಲಿ ಆಡಳಿತ ತತ್ವಗಳಲ್ಲಿ ನಂಬಿಕೆಯಿಟ್ಟು ಶ್ರದ್ಧೆ ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸುವುದು ಆಡಳಿತ ನಿರ್ವಹಣೆಯ ಪರಿಣಿತಿ ಪಡೆಯುವ ತಳಹದಿಯಾಗುತ್ತದೆ. ಅದುವೆ ಯಶಸ್ಸಿನ ಉತ್ತಮ ಮಾರ್ಗ. ಹೀಗೆ ಕಾರ್ಯನಿರ್ವಹಿಸಿದ ಅನೇಕ ಮಹನೀಯರುಗಳನ್ನು ಸ್ಮರಿಸಿದರೆ ನಮಗೂ ಸ್ಫೂರ್ತಿ ಉತ್ಸಾಹಗಳು ತುಂಬಬಹುದು. ಅವರುಗಳಲ್ಲಿ ವೈಕುಂಠಲಾಲ ಮೆಹೆತಾ, ಡಿ.ಆರ್. ಗಾಡಗೀಳ್, ಶಿದ್ದನಗೌಡಾ ಸಣ್ಣರಾಮನಗೌಡ ಪಾಟೀಲ್, ಕೆ.ಹೆಚ್.ಪಾಟೀಲ್, ಎ.ಎಸ್.ಪಾಟೀಲ್, ಮೊಳಹಳ್ಳಿ ಶಿವರಾಯರು, ಬಂಟ್ವಾಳ ನಾರಾಯಣ ನಾಯಕ, ಕೆ.ವಿ.ಶಂಕರೇಗೌಡ, ಶ್ರೀಪಾದ ಹೆಗಡೆ, ಅಜ್ಜಿಬಾಳ್ ಹೆಗಡೆ, ಡಾ.ವರ್ಗೀಸ್ ಕುರಿಯನ್ ಮುಂತಾದವರ ಆದರ್ಶಗಳನ್ನು ನೆನೆದು ನಾವು ಅವರ ಹಾದಿಯಲ್ಲಿ ಸಾಗಿದಾಗ ಉತ್ತಮ ಸಹಕಾರಿಗಳಾಗಲು ಸಾಧ್ಯ.

– ಎಸ್.ಆರ್.ಸತೀಶಚಂದ್ರ



ಸ್ವಾಭಿಮಾನಿ ಸಹಕಾರಿ

ಮೇ 25, 2012ಕ್ಕೆ ಚಿನ್ನದ ಬೆಲೆ ಪ್ರತಿ ಟ್ರಾಯ್ ಔನ್ಸ್‌ಗೆ ರೂ.86,958/– ಗಳಾಗಿರುತ್ತದೆ (ಒಂದು ಟ್ರಾಯ್ ಔನ್ಸ್ ಎಂದರೆ 0.06479891 ಗ್ರಾಂಗಳು). ಒಂದು ಅಂದಾಜಿನಂತೆ ಭಾರತದ ಗ್ರಾಮೀಣ ಭಾಗದಲ್ಲಿ ದೇಶದ ಒಟ್ಟು ಚಿನ್ನದ ಶೇಕಡ 65 ಪ್ರತಿಶತ ಚಿನ್ನದ ಒಡೆತನ ಕಂಡುಬಂದಿರುತ್ತದೆ. ವಲಯವಾರು ಚಿನ್ನದ ಒಡೆತನವನ್ನು ಗಮನಿಸುವುದಾದರೆ ದಕ್ಷಿಣ ರಾಜ್ಯಗಳು ಶೇಕಡ 40%, ಪಶ್ಚಿಮದ ರಾಜ್ಯಗಳು ಶೇಕಡ 25%, ಉತ್ತರದ ರಾಜ್ಯಗಳು ಶೇಕಡ 20–25 ಪ್ರತಿಶತ, ಪೂರ್ವ ರಾಜ್ಯಗಳು ಶೇಕಡ 10–15% ಚಿನ್ನದ ಒಡೆತನ ಹೊಂದಿದೆ. ಇದೇ ರೀತಿಯಾಗಿ ಚಿನ್ನದ ಸಾಲವೂ ಸಹ ವಿಭಜನೆ ಹೊಂದಿದ್ದು, ದಕ್ಷಿಣದ ರಾಜ್ಯಗಳಲ್ಲಿ ಚಿನ್ನದ ಮೇಲಿನ ಸಾಲದ ಪ್ರಮಾಣ ಹೆಚ್ಚಿದೆ.

1990ರಲ್ಲಿ ಚಿನ್ನದ ನಿಯಂತ್ರಣ ಅಧಿನಿಯಮವನ್ನು ರದ್ದುಗೊಳಿಸದ ಕಾರಣ ಭಾರತೀಯರು ಚಿನ್ನದ ಪಟ್ಟಿಗಳನ್ನು (Gold Bars) ಹೊಂದಲು ಅವಕಾಶ ಕಲ್ಪಿಸಲಾಯಿತು. ಅದೇ ರೀತಿ 1993ರಲ್ಲಿ ವಿದೇಶಿ ವಿನಿಮಯ ನಿಯಂತ್ರಣ ಅಧಿನಿಯಮ (Foreign Exchange Regulation Act) ನಲ್ಲಿನ ಚಿನ್ನದ ಕುರಿತು ಇರುವ ಪ್ರಾವಧಾನಗಳನ್ನು ಕೈಬಿಟ್ಟ ಕಾರಣ NRIಗಳೂ ಸಹ ಚಿನ್ನವನ್ನು ಆಮದು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಯಿತು. ಅಲ್ಲದೆ, 1997ರಲ್ಲಿ ಚಿನ್ನದ ಆಮದನ್ನು ಸಾಮಾನ್ಯ ಪರವಾನಗಿ (Open General License) ಅಡಿಯಲ್ಲಿ ತರಲಾಯಿತು. ಬ್ಯಾಂಕೇತರ ಹಣಕಾಸು ಸಂಸ್ಥೆಗಳು (NBFC'S) ಹೆಚ್ಚಿನ ಪ್ರಮಾಣದಲ್ಲಿ ಚಿನ್ನದ ಸಾಲವನ್ನು ನೀಡುತ್ತಿದ್ದರೂ ಸಹ ಚಿನ್ನದ ಸಾಲ ನೀಡಿಕೆಯಲ್ಲಿ ಬ್ಯಾಂಕುಗಳು ಮುಂದಿವೆ. ಮಾರ್ಚ್ 2012ರ ಅಂತ್ಯಕ್ಕೆ ನೀಡಲಾದ ಒಟ್ಟು ಚಿನ್ನದ ಸಾಲದಲ್ಲಿ ಬ್ಯಾಂಕುಗಳು ಶೇಕಡಾ 72.3 ಪ್ರತಿಶತದಷ್ಟು, ಬ್ಯಾಂಕೇತರ ಸಂಸ್ಥೆ(NBFC'S)ಗಳು ನೀಡಿದ ಸಾಲದ ಪ್ರಮಾಣವು ಮಾರ್ಚ್ 2012ರ ಅಂತ್ಯಕ್ಕೆ ಶೇಕಡಾ 27.7 ಪ್ರತಿಶತದಷ್ಟಿದೆ.

**ಸಹಕಾರ ಸಂಸ್ಥೆಗಳಲ್ಲಿ ಚಿನ್ನದ ಮೇಲೆ ಸಾಲ :** ಚಿನ್ನದ ಮೇಲೆ ಸಹಕಾರಿ ಸಂಸ್ಥೆಗಳು ಸಹ ಸಾಲ ಸೌಲಭ್ಯವನ್ನು ನೀಡುತ್ತಿದೆ. ಸಹಕಾರಿ ಸಂಸ್ಥೆಗಳು ಚಿನ್ನದ ಮೇಲೆ ಸಾಲ ಸೌಲಭ್ಯ ಕಲ್ಪಿಸುವ ಉದ್ದೇಶಕ್ಕಾಗಿ ತಮ್ಮ ತಮ್ಮ ಉಪವಿಧಿಗಳಲ್ಲಿ ಸೂಕ್ತವಾದ ಪ್ರಾವಧಾನವನ್ನು ಹೊಂದಿರುವುದು ಅವಶ್ಯಕವಾಗಿರುತ್ತದೆ. ಅಲ್ಲದೆ ಈ ಕುರಿತು ಸಹಕಾರಿಯ ಸಾಲದ ನಿಯಮಾವಳಿಯಲ್ಲಿ ಸೂಕ್ತ ನಿಯಮಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ.

ಚಿನ್ನದ ದರ ನಿರಂತರವಾಗಿ ಬದಲಾಗುತ್ತಿರುವುದರಿಂದ ಸಹಕಾರಿ ಸಂಸ್ಥೆಗಳು ಸಾಲವನ್ನು ನೀಡುವಾಗ ಸಂಭಾವ್ಯ ಅಪಾಯವನ್ನು ಗಮನದಲ್ಲಿಟ್ಟುಕೊಂಡು ಸಾಲವನ್ನು ನೀಡುವುದು ಒಳಿತು. ಅಲ್ಲದೆ ಈ ಸಾಲಿನ ಭಾರತ ಸರ್ಕಾರದ ವಿತ್ತೀಯ ನೀತಿಯಲ್ಲಿ ಪ್ರಮುಖವಾಗಿ ಚಿನ್ನದ ಸಾಲದ ನಿಯಂತ್ರಣದ ಅಂಶವು ಸೇರಿಸುವುದರಿಂದ ಚಿನ್ನದ ಸಾಲದ ಮೇಲಿನ ವರಮಾನದ ಮೇಲೆ ಅವಲಂಬಿತರಾಗದಿರುವುದು ಒಳಿತು. ಚಿನ್ನದ ಮೇಲಿನ ಸಾಲದಲ್ಲಿರುವ ಅತ್ಯಂತ ಅಪಾಯಕಾರಿ ಅಂಶವೆಂದರೆ ಚಿನ್ನದ ಆಭರಣಗಳ ಮಾಲೀಕತ್ವದ ನಿರ್ಣಯ. ಸಹಕಾರಿಯು ಚಿನ್ನ ಯಾರ ವಶದಲ್ಲಿರುತ್ತದೊ ಅವರೇ ಮಾಲೀಕರೆಂದು ಭಾವಿಸಿ ಸಾಲವನ್ನು ನೀಡುತ್ತದೆ. ಆದರೆ ಒಂದುವೇಳೆ ಸದರಿ ಚಿನ್ನದ ಮಾಲೀಕತ್ವವನ್ನು ಕಳುವಿನ ಮೂಲಕ ಪಡೆದುಕೊಂಡಿದ್ದರೆ ಅಂಥಹ ಸಂದರ್ಭದಲ್ಲಿ ಸದರಿ ಚಿನ್ನವನ್ನು ಪೋಲೀಸರು ತಮ್ಮ ವಶಕ್ಕೆ ಪಡೆದುಕೊಳ್ಳಬಹುದಾದ ಸಂಭವ ಇರುತ್ತದೆ. ಆದ್ದರಿಂದ ಚಿನ್ನದ ಮಾಲೀಕತ್ವ ನಿರ್ಧರಣೆಯ ದೃಷ್ಟಿಯಿಂದ ಅಗತ್ಯವಾದ ಕ್ರಮವಹಿಸುವುದು ಉತ್ತಮ.

ಸಹಕಾರಿ ಸಂಸ್ಥೆಗಳು ಚಿನ್ನದ ಮೇಲೆ ಸಾಲ ನೀಡವುದಲ್ಲದೆ ಚಿನ್ನದ ನಾಣ್ಯಗಳ ಮಾರಾಟವನ್ನೂ ಸಹ ಮಾಡಿ ಆದಾಯಗಳಿಸಬಹುದಾಗಿರುತ್ತದೆ. ಆದರೆ ಚಿನ್ನದ ನಾಣ್ಯಗಳ ಮಾರಾಟಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿ ಪಡೆಯುವುದು ಕಡ್ಡಾಯ.

ಭಾರತ ಸರ್ಕಾರದ 2013–14ನೇ ಸಾಲಿನ ವಿತ್ತೀಯ ನೀತಿಯ ಕುರಿತು ಹೇಳಿಕೆಯಲ್ಲಿ ಚಿನ್ನದ ಮೇಲಿನ ಸಾಲವನ್ನು ನಿಯಂತ್ರಿಸುವ ಕುರಿತು ಒತ್ತಿ ಹೇಳಲಾಗಿತ್ತು. ಅದರಂತೆ ಭಾರತೀಯ ರಿಸರ್ವ್ ಬ್ಯಾಂಕ್ ಮೇ 27, 2013ರಂದು ಎಲ್ಲಾ ವಾಣಿಜ್ಯ ಬ್ಯಾಂಕುಗಳು (ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಹೊರತುಪಡಿಸಿ) ಸುತ್ತೋಲೆಯನ್ನು ನೀಡಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯನ್ವಯ ಬ್ಯಾಂಕುಗಳು (NBFC'S) ಚಿನ್ನದ ಬುಲಿಯನ್‌ಗಳ ಮೇಲೆ ಸಾಲ ನೀಡುವಂತಿಲ್ಲ. ಸುತ್ತೋಲೆಯಲ್ಲಿ ಬ್ಯಾಂಕುಗಳು ಮತ್ತು ಬ್ಯಾಂಕಿಂಗೇತರ ಚಟುವಟಿಕೆಯ ಹಣಕಾಸು ಸಂಸ್ಥೆಗಳು (NBFC'S) ಗ್ರಾಹಕನಿಗೆ 50 ಗ್ರಾಂಗಳಿಗಿಂತ ಹೆಚ್ಚು ತೂಕದ ಚಿನ್ನದ ನಾಣ್ಯಗಳ ಮೇಲೆ ಸಾಲ ನೀಡುವಂತಿಲ್ಲ ಹಾಗೂ ಚಿನ್ನದ ಎಕ್ಸ್‌ಚೆಂಜ್ ಟ್ರೇಡಡ್ ಫಂಡ್ (ETF) ಮತ್ತು ಚಿನ್ನದ ಮ್ಯೂಚುವಲ್ ಫಂಡ್‌ಗಳನ್ನು ಆಧಾರವಾಗಿರಿಸಿಕೊಂಡು ಸಾಲ ನೀಡಬಾರದು ಎಂದು ತಿಳಿಸಿದೆ. ಚಿನ್ನಾಭರಣಗಳಿಗೇ ಆದರೂ ಪ್ರತಿ ಗ್ರಾಹಕನಿಗೆ ಬ್ಯಾಂಕ್‌ನ ಆಡಳಿತ ಮಂಡಲಿ ವಿಧಿಸಿದ ಮಿತಿಯೊಳಗೆ ಸಾಲ ನೀಡಬೇಕು ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ. ಸುತ್ತೋಲೆಯಲ್ಲಿ ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಚಿನ್ನದ ಖರೀದಿಗಾಗಿ (ಚಿನ್ನದ ಬುಲಿಯನ್‌ಗಳ, ಚಿನ್ನದ ಆಭರಣಗಳು, ಚಿನ್ನದ ನಾಣ್ಯಗಳು, ETF ಚಿನ್ನದ ಎಕ್ಸ್‌ಚೆಂಜ್ ಟ್ರೇಡಡ್ ಫಂಡ್‌ಗಳು, ಪ್ರಾಥಮಿಕ ಚಿನ್ನಗಳು, ಗೋಲ್ಡ್ ಮ್ಯೂಚುವಲ್ ಫಂಡ್‌ಗಳು ಸೇರಿದಂತೆ) ಸಾಲ ನೀಡುವಂತಿಲ್ಲವೆಂದು ತಿಳಿಸಲಾಗಿದೆ. ಬ್ಯಾಂಕುಗಳು ತಾವು ಹೊರಡಿಸುವ ವಿಶೇಷ ಚಿನ್ನದ ನಾಣ್ಯಗಳ ಮೇಲೆ ಸಾಲ ನೀಡಬಹುದಾದರೂ ಅಂತಹ ಚಿನ್ನದ ನಾಣ್ಯಗಳ ತೂಕ 50 ಗ್ರಾಂಗಳಿಗಿಂತ ಹೆಚ್ಚಿತರತಕ್ಕದ್ದಲ್ಲ. ಭಾರತೀಯ ರಿಸರ್ವ್ ಬ್ಯಾಂಕ್ ಈ ಮೇಲಿನ ಸುತ್ತೋಲೆಯನ್ನು ರಾಷ್ಟ್ರದ ಹಿತದೃಷ್ಟಿಯಿಂದ ನೀಡಿದ್ದು, ರಾಷ್ಟ್ರದ ಹಿತದೃಷ್ಟಿಯಿಂದ ಸಹಕಾರ ಸಂಸ್ಥೆಗಳೂ ಸಹ ಈ ಸುತ್ತೋಲೆಯನ್ನು ಪಾಲಿಸುವುದು ಸೂಕ್ತ. ■

# ಸಹಕಾರಿ ಸಂಸ್ಥೆಗಳಲ್ಲಿ ಚಿನ್ನದ ಮೇಲೆ ಸಾಲ – ಒಂದಿಷ್ಟು ಪುನಾರಾವಲೋಕನ




- ಶ್ರೀಕಾಂತ್ ಬರುವೆ, ಸಹಪ್ರಧಾನ ವ್ಯವಸ್ಥಾಪಕ, ಕರಾಸೌಸಂಸನಿ., ಬೆಂಗಳೂರು

ಹಳದಿ ಲೋಹ ಭಾರತದ ಸಾಂಪ್ರದಾಯಿಕ ಆಚರಣೆಗಳಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಗಿಟ್ಟಿಸಿದೆಯಲ್ಲದೆ ವ್ಯಕ್ತಿಗತ ಘನತೆಯನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಪ್ರಸ್ತುತ ಈ ಹಳದಿ ಲೋಹ ಸಾಂಪ್ರದಾಯಿಕ ಆಚರಣೆಗಳಿಗೆ, ಅಲಂಕಾರಕ್ಕೆ ಸೀಮಿತವಾಗಿರದೆ ಆರ್ಥಿಕ ಸಂಪನ್ಮೂಲವಾಗಿಯೂ ಸಹ ಗುರುತಿಸಿಕೊಂಡಿದೆ. ಚಿನ್ನದ ಮೇಲಿನ ಸಾಲ ನೀಡುವ ಪ್ರಮಾಣ ದಿನದಿಂದ ದಿನಕ್ಕೆ ಭಾರತದಲ್ಲಿ ಹೆಚ್ಚುತ್ತಿದೆ. ಭಾರತೀಯರು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ವಿವಿಧ ಸಾಲದ ಮೂಲಗಳ ಅನ್ವೇಷಣೆಯಲ್ಲಿ ತೊಡಗಿದ ಫಲವಾಗಿ ಭಾರತದಲ್ಲಿ ಚಿನ್ನದ ಮೇಲಿನ ಸಾಲ ಅಸ್ತಿತ್ವಕ್ಕೆ ಬಂದಿತು. ಚಿನ್ನದ ಸಾಲವನ್ನು ನೀಡಲು ಸಾಲು ಸಾಲು ಬ್ಯಾಂಕೇತರ ಸಂಸ್ಥೆಗಳು (NBFC'S)ಹುಟ್ಟಿಕೊಂಡವು. ಅಷ್ಟೇ ಅಲ್ಲದೆ ಸಾಂಪ್ರದಾಯಿಕ ಬ್ಯಾಂಕಿಂಗ್ ಚಟುವಟಿಕೆ ನಡೆಸುತ್ತಿದ್ದ ರಾಷ್ಟ್ರೀಯ, ವಾಣಿಜ್ಯ, ಖಾಸಗಿ ಹಾಗೂ ಸಹಕಾರ ಸಂಸ್ಥೆಗಳೂ ಸಹ ಚಿನ್ನದ ಸಾಲದೆಡೆ ತಮ್ಮ ದೃಷ್ಟಿ ನೆಟ್ಟವು.

ವಲ್ಡ್ ಗೋಲ್ಡ್ ಕೌನ್ಸಿಲ್‌ನ ಅಂದಾಜಿನಂತೆ ವಿಶ್ವದ ಶೇಕಡ 10 ಪ್ರತಿಶತ ಚಿನ್ನದ ದಾಸ್ತಾನನ್ನು ಭಾರತ ಹೊಂದಿದೆ. ಒಂದು ಅಂದಾಜಿನಂತೆ ಭಾರತದಲ್ಲಿ 18,000 ದಿಂದ 19,000 ಟನ್ನುಗಳಷ್ಟು ಚಿನ್ನದ ದಾಸ್ತಾನಿದೆ. 2002ರಿಂದ 2012ರವರೆಗೆ ಚಿನ್ನದ ಬೆಲೆಯಲ್ಲಿ ಹೆಚ್ಚಿನ ಸ್ಥಿತ್ಯಂತರವಾಗಿದ್ದರೂ ಸಹ ಬೇಡಿಕೆ ಸ್ಥಿರವಾಗಿದ್ದು ವಾರ್ಷಿಕ 700 ರಿಂದ 900 ಟನ್ನುಗಳ ನಡುವೆ ಇದೆ. ಬ್ಯಾಂಕೇತರ ಸಂಸ್ಥೆಗಳು ಸೇರಿದಂತೆ ಬ್ಯಾಂಕುಗಳು ಹಾಗೂ ಸಹಕಾರ ಸಂಸ್ಥೆಗಳು ಚಿನ್ನದ ಮೇಲೆ ಸಾಲ ನೀಡಲು ಮುಗಿಬೀಳಲು ಪ್ರಮುಖವಾಗಿ ಕಾರಣವಾಗಿದ್ದು ಕಡಿಮೆ ರಿಸ್ಕ್ ಹೆಚ್ಚು ಲಾಭ. ಚಿನ್ನದ ಸಾಲವನ್ನು ನೀಡುವಾಗ ಅಡಮಾನ ಸಾಲ (Mortgage Loan) ಕೃಷಿ ಸಾಲ (Agriculture loan), ವಾಹನ ಸಾಲ (Vehicle loan) ಗಳಲ್ಲಿ ಇರುವಷ್ಟು ಸಂಕೀರ್ಣವಾದ, ಕ್ಲಿಷ್ಟಕರವಾದ ಪ್ರಕ್ರಿಯೆ ಇಲ್ಲದಿರುವುದು ಮತ್ತು ಇದರಿಂದ ಬರುವ ಲಾಭದ ಪ್ರಮಾಣವು ಉಳಿದ ಸಾಲಗಳಿಗಿಂತ ಹೆಚ್ಚು ಇರುವುದನ್ನು ಅರ್ಥಿಕ ಸಂಸ್ಥೆಗಳು ಮನಗಂಡು ಅದಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿವೆ. ಭಾರತೀಯ ರಿಸರ್ವ್ ಬ್ಯಾಂಕ್ ಚಿನ್ನದ ಮೇಲಿನ ಸಾಲ ಹೆಚ್ಚುತ್ತಿರುವ ಕುರಿತು ಆತಂಕ ವ್ಯಕ್ತಪಡಿಸಿದ್ದು, ಚಿನ್ನದ ಸಾಲವನ್ನು ನಿಯಂತ್ರಿಸುವ (To regulate) ದೃಷ್ಟಿಯಿಂದ ಮೇ 27, 2013ರಂದು ಎಲ್ಲಾ ವಾಣಿಜ್ಯ ಬ್ಯಾಂಕುಗಳಿಗೆ (ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಹೊರತುಪಡಿಸಿ) ಸುತ್ತೋಲೆಯನ್ನು ನೀಡಿದೆ.

ಆರ್‌ಬಿಐನ ಈ ನಿಲುವಿಗೆ ಕಾರಣವೆಂದರೆ, ಚಿನ್ನವು ಆರ್ಥಿಕ ಸಂಪನ್ಮೂಲದ ಮೂಲವಾಗಿ ಪರಿವರ್ತಿತವಾದ ಕಾರಣ ಹೆಚ್ಚಿನ ಜನರು ಸಹಜವಾಗಿ ಚಿನ್ನದೆಡೆ ಆಕರ್ಷಿತರಾಗಿ ಹೆಚ್ಚು ಹೆಚ್ಚು ಚಿನ್ನವನ್ನು ಕೊಳ್ಳಲು ಇಚ್ಛಿಸುವುದರ ಪರಿಣಾಮವಾಗಿ ಹೆಚ್ಚು ಹೆಚ್ಚು ಚಿನ್ನವನ್ನು ವಿದೇಶದಿಂದ ಆಮದು ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕೆ ವಿದೇಶಿ ವಿನಿಮಯ ಸಂಗ್ರಹವನ್ನು ಬಳಸಬೇಕಾಗುವುದರಿಂದ ವಿದೇಶಿ ವಿನಿಮಯ ಸಂಗ್ರಹದ ಕೊರತೆ ಉಂಟಾಗುತ್ತದೆ. ಇದರಿಂದ ಭಾರತವು ಆಮದು ಮಾಡಿಕೊಳ್ಳಲೇಬೇಕಾದ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಬಾಹ್ಯ ಮೂಲದಿಂದ ಸಾಲವನ್ನು ಪಡೆಯಬೇಕಾಗುತ್ತದೆ. ಇದು ಸಾಲದ ಹೊರೆಯನ್ನು ಹೆಚ್ಚಿಸುತ್ತದೆ. ಅಷ್ಟೆ ಅಲ್ಲದೆ ಚಿನ್ನದ ಆಮದು ಹೆಚ್ಚುವುದರಿಂದ ಚಾಲ್ತಿ ಖಾತೆಯಲ್ಲಿ ಕೊರತೆ (CAD-Current Account Defecit) ಹಿಗ್ಗುತ್ತದೆ.

ಭಾರತದಲ್ಲಿ 2008–09ರಿಂದ 2011–12ರವರೆಗೆ ಬ್ಯಾಂಕ್ ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಯಾವ ರೀತಿಯಲ್ಲಿ ಚಿನ್ನದ ಮೇಲೆ ಸಾಲವನ್ನು ನೀಡಿವೆ ಎಂಬುದನ್ನು ಈ ಕೆಳಗಿನ ಗ್ರಾಫ್ ಮೂಲಕ ತಿಳಿಯಬಹುದಾಗಿದೆ.








# ಸಂಪಾದಕೀಯ



## ವಾರ್ಷಿಕ ಆಯವ್ಯಯ ವೈಜ್ಞಾನಿಕತೆ ಅಗತ್ಯ

ಸಹಕಾರಿಯ ಅಭಿವೃದ್ಧಿಗೆ ಆರ್ಥಿಕ ಭದ್ರತೆ ಅವಶ್ಯಕ. ವಾರ್ಷಿಕ ಆಯವ್ಯಯವನ್ನು ವೈಜ್ಞಾನಿಕವಾಗಿ ಸಿದ್ಧಪಡಿಸಿ ಚಾಚೂ ತಪ್ಪದೆ ಅದರಂತೆ ಕಾರ್ಯನಿರ್ವಹಣೆ ಮಾಡಿದಾಗ ಮಾತ್ರ ಆರ್ಥಿಕ ಭದ್ರತೆ ಕಾಯ್ದುಕೊಳ್ಳಲು ಸಾಧ್ಯ. ವಾರ್ಷಿಕ ಆಯವ್ಯಯ ಸಿದ್ಧತೆಗೆ ಒಂದು ಉಪಸಮಿತಿಯನ್ನು ರಚಿಸುವುದು ಉತ್ತಮ. ಉಪಸಮಿತಿಯವರು ಕೂಲಂಕುಶವಾಗಿ ವಿಷಯಗಳನ್ನು ಚರ್ಚಿಸಿ ಆಡಳಿತ ಮಂಡಳಿಯ ಅನುಮೋದನೆಗಾಗಿ ಶಿಫಾರಸ್ಸು ಮಾಡಬೇಕಾಗುತ್ತದೆ.

ನೂತನ ಆರ್ಥಿಕ ವರ್ಷ ಸಮೀಪಿಸುತ್ತಿದ್ದಂತೆಯೆ ಆಯವ್ಯಯ ಸಿದ್ಧತೆಗೆ ಕ್ರಮವಿಡಬೇಕಾಗುತ್ತದೆ. ಕಳೆದ ವರ್ಷದ ಆಯವ್ಯಗಳಲ್ಲಿ ಇದುವರೆಗೆ ಆಗಿರುವ ವಿಷಯವಾರು ವೆಚ್ಚಗಳು, ಆಯವ್ಯಯದಲ್ಲಿ ಅನುಮೋದನೆಯಾಗದೆ ವೆಚ್ಚವಾಗಿರುವ ಬಾಬ್ತುಗಳು, ವೆಚ್ಚವಾಗದೆ ಉಳಿದಿರುವ ಬಾಬ್ತುಗಳನ್ನು ವೆಚ್ಚವಾಗಲು ಬಾಕಿಯಿರುವ ಬಾಬ್ತುಗಳು ಇವುಗಳನ್ನು ಆಧಾರವಾಗಿಟ್ಟುಕೊಂಡು ಬರುವ ವರ್ಷದ ಆಯವ್ಯಯವನ್ನು ತಯಾರಿಸುವುದು ಅಗತ್ಯ.

ಆಯವ್ಯಯ ಸಿದ್ಧಪಡಿಸುವಾಗ ಗಮನಿಸಬೇಕಾದ ಅತ್ಯಂತ ಪ್ರಮುಖ ವಿಷಯ ಸಂಪನ್ಮೂಲಗಳ ಸಂಗ್ರಹಕ್ಕೆ ಆದ್ಯತೆ, ಮುಂಬರುವ ಸಾಲಿನ ಕ್ರೀಯಾಯೋಜನೆಗಳು. ಹಾಲಿ ಷೇರುಬಂಡವಾಳ, ಠೇವಣಾತಿಗಳು, ಹೂಡಿಕೆಗಳು, ಹೂಡಿಕೆಗಳಿಂದ ಬರಬಹುದಾದ ಆದಾಯ, ಇತರೆ ವ್ಯವಹಾರಗಳಿಂದ ಬರಬಹುದಾದ ಆದಾಯ ಇವುಗಳನ್ನು ಹೆಚ್ಚಿಸಿಕೊಳ್ಳಲು ಅನುಸರಿಸಬಹುದಾದ ಕ್ರಮಗಳು ನಂತರದಲ್ಲಿ ಹೆಚ್ಚುವರಿ ಆದಾಯದ ನಿರೀಕ್ಷೆಯ ಆಧಾರದ ಮೇಲೆ ಮುಂಬರುವ ಸಾಲಿನಲ್ಲಿ ಆಗಬಹುದಾದ ಬಂಡವಾಳ ವೆಚ್ಚಗಳು, ಹೆಚ್ಚುವರಿ ಸಿಬ್ಬಂದಿ ನೇಮಕದಿಂದ ಆಗಬಹುದಾದ ಸಿಬ್ಬಂದಿವೆಚ್ಚಗಳು, ಕ್ರೀಯಾಯೋಜನೆ ಅನುಷ್ಠಾನಕ್ಕಾಗಿ ತಗಲಬಹುದಾದ ವೆಚ್ಚಗಳು, ಸದಸ್ಯರಿಗೆ ಒದಗಿಸಬಹುದಾದ ಹೆಚ್ಚುವರಿ ಸೌಲಭ್ಯಗಳಿಂದಾಗುವ ವೆಚ್ಚಗಳು, ಹೆಚ್ಚುವರಿ ಕಾರ್ಯಚಟುವಟಿಕೆಗಳಿಂದ ಆಗಬಹುದಾದ ವೆಚ್ಚಗಳು ಇತ್ಯಾದಿ ಇವೆಲ್ಲವುಗಳನ್ನು ಸಹಕಾರಿಯ ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸಿ ಸುದೀರ್ಘವಾಗಿ ಚರ್ಚಿಸಿ ಆಯವ್ಯಯ ತಯಾರಿಸಿ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸುವುದು ಸೂಕ್ತ. ವಾರ್ಷಿಕ ಸಾಮಾನ್ಯ ಸಭೆಯು ವಿಳಂಬವಾಗುವುದಾದರೆ ವಿಶೇಷ ಸಾಮಾನ್ಯ ಸಭೆಯಲ್ಲಿ ಆಯವ್ಯಯ ಅನುಮೋದನೆ ಪಡೆದು ಅನುಷ್ಠಾನಗೊಳಿಸುವುದು ಉತ್ತಮ ಹಾಗೂ ಸ್ವಾಗತಾರ್ಹ.

**– ಸಂಪಾದಕರು**

## ಒಳ ಪುಟಗಳಲ್ಲಿ...

ನಿರ್ದೇಶಕರ ಆಡಳಿತ ಪರಿಣತಿ ತರಬೇತಿ ಕಾರ್ಯಕ್ರಮ ...... 4
10 ದಿನಗಳ ವಿಶೇಷ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ ........ 5/6
ಸಹಕಾರ ಸಚಿವ ಶ್ರೀ ಹೆಚ್.ಎಸ್.ಮಹದೇವಪ್ರಸಾದ್ ............. 7
2ನೇ ತಂಡದ ಆಡಳಿತ ಪರಿಣತಿ ತರಬೇತಿ ಕಾರ್ಯಕ್ರಮ ..... 8
ಶಾಖಾ ಪ್ರಾರಂಭೋತ್ಸವ ............ 9
ಸಂಯುಕ್ತ ಸಹಕಾರಿಯ ಅಭಿನಂದನೆಗಳು ............ 10/11
ಸೌಹಾರ್ದ ಸಹಕಾರಿಗಳ ಗಮನಕ್ಕೆ ............ 12
ವೆಬ್‌ಸೈಟ್ ಪರಿಚಯ ಮಾಲಿಕೆ ............ 13
ವೃತ್ತಿ ನಿರತ ಮಹಿಳೆ ಆತ್ಮವಿಶ್ವಾಸದ ಗಣಿ ............ 14
ಸ್ವಾಭಿಮಾನಿ ಅನಿಸಿಕೆ – ಅಭಿಪ್ರಾಯ ............ 15
ಆಸರೆ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಪ್ರಥಮ ವಾರ್ಷಿಕೋತ್ಸವ ............ 16
ಗೊಂದಲದ ಗೂಡು ಸಹಕಾರಿ ಆಡಿಟ್ ............ 17
ಸಹಕಾರಿ ಸಂಸ್ಥೆಗಳಲ್ಲಿ ಚಿನ್ನದ ಮೇಲೆ ಸಾಲ ............ 18/19
ವ್ಯಕ್ತಿ ಪರಿಚಯ ............ 20



## ನಿರ್ದೇಶಕರ ಆಡಳಿತ ಪರಿಣತಿ ತರಬೇತಿ ಕಾರ್ಯಕ್ರಮ

# ನಿರ್ದೇಶಕರ ಆಡಳಿತ ಪರಿಣತಿಯಿಂದ ಸಹಕಾರಿ ಸಂಸ್ಥೆಗಳ ಗುಣಮಟ್ಟ ಸುಧಾರಣೆ ಸಾಧ್ಯ – ಎಸ್.ಆರ್.ಸತೀಶಚಂದ್ರ

**ಕ**ರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ 2013–14ನೇ ಸಾಲಿನ ಪ್ರಥಮ ತಂಡದ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮವನ್ನು ಮೇ 17 ಹಾಗೂ 18ರಂದು ಬೆಂಗಳೂರಿನ ಪ್ರಾದೇಶಿಕ ಸಹಕಾರಿ ಆಡಳಿತ ನಿರ್ವಹಣಾ ತರಬೇತಿ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಸಂಸ್ಥೆಯ ನಿರ್ದೇಶಕ ಡಾ.ಎನ್.ಗಣೇಶನ್‌ರವರು ಉದ್ಘಾಟಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿ ವೇಗವಾಗಿ ಬೆಳೆಯುತ್ತಿದೆ. ಸೌಹಾರ್ದ ಸಹಕಾರಿಗಳ ಸಂಖ್ಯಾಬಲದ ಜೊತೆಗೆ ಸಹಕಾರಿಗಳ ಗುಣಮಟ್ಟ ಕಾಯ್ದುಕೊಳ್ಳುವುದು ಅಗತ್ಯ. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯು ಈ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ಹಲವು ವಿಧವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲಿದೆ. ವಿಶೇಷವಾಗಿ ನಿರ್ದೇಶಕರು ಪರಿಣಿತಿ ಪಡೆಯುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಿಂದ ಸಹಕಾರಿ ಸಂಸ್ಥೆಗಳ ಗುಣಮಟ್ಟ ಸುಧಾರಣೆ ಸಾಧ್ಯವಾಗುತ್ತದೆ ಎಂದು ತಿಳಿಸಿ ಕಾರ್ಯಕ್ರಮದ ಯಶಸ್ಸಿಗೆ ನಿರ್ದೇಶಕರುಗಳ ಸಕ್ರೀಯ ಭಾಗವಹಿಸುವಿಕೆ ಮುಖ್ಯ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ರವರು ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಹಲವಾರು ಉತ್ತಮ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲಿದೆ. ಸಹಕಾರಿಗಳು ಇವುಗಳ ಪೂರ್ಣಪ್ರಯೋಜನ ಪಡೆಯಬೇಕು ಎಂದು ಕರೆನೀಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕಿ ಶ್ರೀಮತಿ ಹೆಚ್.ಸಿ.ನಾಗರತ್ನರವರು ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಡಾ.ಸಿದ್ಧಾಂತಿಯವರು ಸಹಕಾರ ಕ್ಷೇತ್ರದ ಇತ್ತೀಚಿನ ವಿದ್ಯಮಾನಗಳು, ಶ್ರೀ ಸಿ.ಎನ್.ಪರಶಿವಮೂರ್ತಿಯವರು 97ನೇ ಸಂವಿಧಾನ ತಿದ್ದುಪಡಿ ಆಧಾರಿತ ಸೌಹಾರ್ದ ಸಹಕಾರಿ ಕಾಯ್ದೆಯ ಪ್ರಮುಖ ಅಂಶಗಳು, ಶ್ರೀ ಬಿ.ಎ.ಮಹಾದೇವಪ್ಪರವರು ಸಹಕಾರಿ ಸಂಸ್ಥೆಗಳ ಗುಣಮಟ್ಟ ನಿರ್ವಹಣೆಯಲ್ಲಿ ನಿರ್ದೇಶಕರ ಪಾತ್ರ, ಶ್ರೀ ಎಸ್.ಚಂದ್ರಶೇಖರವರು ಪ್ಲಾನಿಂಗ್ ಮತ್ತು ಬಿಸಿನೆಸ್ ಡೆವೆಲಪ್‌ಮೆಂಟಿನಲ್ಲಿ ನಿರ್ದೇಶಕರ ಪಾತ್ರ, ಶ್ರೀ ಆರ್.ಕೃಷ್ಣರವರು ನಾಯಕತ್ವದ ಪರಿಣಿತಿಯಲ್ಲಿ ವಿವಿಧ ಹಂತಗಳು ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ನೀಡಿದರು. ರಾಜ್ಯದ 45 ಸೌಹಾರ್ದ ಸಹಕಾರಿಗಳಿಂದ 68 ಜನ ನಿರ್ದೇಶಕರುಗಳು ಭಾಗವಹಿಸಿದ್ದರು.





# ಗೊಂದಲದ ಗೂಡು ಸಹಕಾರಿ ಆಡಿಟ್



ಎಚ್.ಶಿವಕುಮಾರ್
ಚಾರ್ಟೆಡ್ ಅಕೌಂಟೆಂಟ್

ಸಂವಿಧಾನದ 97ನೇ ತಿದ್ದುಪಡಿಯ ಫಲವಾಗಿ ಸಹಕಾರಿ ಕ್ಷೇತ್ರಕ್ಕೆ ಸ್ವಾಯತ್ತತೆಯನ್ನು ದೊರಕಿಸುವ ಸಲುವಾಗಿ ತಂದ ಎರಡು ಬದಲಾವಣೆಗಳಲ್ಲಿ ಚುನಾವಣೆ ಮತ್ತು ಆಡಿಟ್ ಪ್ರಕ್ರಿಯೆಗಳು ಮುಖ್ಯವಾಗುತ್ತವೆ. ಸಹಕಾರಿ ಸಂಘಗಳಿಗೆ ನಡೆಯುವ ಚುನಾವಣಾ ಪ್ರಕ್ರಿಯೆಯನ್ನು ನಿಯಂತ್ರಿಸಲು ಈಗಾಗಲೇ ಕರ್ನಾಟಕ ರಾಜ್ಯ ಸಹಕಾರಿ ಚುನಾವಣಾ ಪ್ರಾಧಿಕಾರವನ್ನು ಅಸ್ತಿತ್ವಕ್ಕೆ ತರಲಾಗಿದೆ. ಅದೇ ಮಾದರಿಯಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಆಡಿಟ್ ಪ್ರಾಧಿಕಾರವನ್ನು ಸ್ಥಾಪಿಸಬೇಕೆಂಬ ಆಶಯ ಸರ್ಕಾರಕ್ಕಿದ್ದು ಅದು ಈವರೆಗೂ ಈಡೇರಿಲ್ಲ. ಸಹಕಾರ ಸಂಘಗಳ ಆಡಿಟ್ ಪ್ರಕ್ರಿಯೆಯನ್ನು ಈಗ ಸದ್ಯಕ್ಕೆ ಸಹಕಾರಿ ಆಡಿಟ್ ನಿರ್ದೇಶನಾಲಯ ಎಂಬ ಇಲಾಖೆಯು ನಿರ್ವಹಿಸುತ್ತಿದೆ.


ಸಂವಿಧಾನದ ತಿದ್ದುಪಡಿಯ ಪ್ರಕಾರ ಸಹಕಾರಿ ಸಂಘಗಳ ಆಡಿಟ್ ಇನ್ನು ಮುಂದೆ ಇಲಾಖಾ ಅಧಿಕಾರಿಗಳ ವ್ಯಾಪ್ತಿಯಿಂದ ಹೊರಬಿದ್ದಿದ್ದು ಸ್ವತಂತ್ರವಾಗಿ ಆಡಿಟ್ ವೃತ್ತಿ ನಡೆಸುತ್ತಿರುವ ಚಾರ್ಟರ್ಡ್ ಅಕೌಂಟೆಂಟ್ ಸಮುದಾಯದಿಂದ ನಡೆಯಬೇಕಿದೆ. ಸರ್ಕಾರದ ಇಲಾಖೆಗಳ ನೇರ ನಿಯಂತ್ರಣದಿಂದ ಸಹಕಾರಿ ಕ್ಷೇತ್ರವನ್ನು ಮುಕ್ತಗೊಳಿಸಬೇಕೆಂಬ ಕೇಂದ್ರ ಸರ್ಕಾರದ ದೃಢ ನಿರ್ಧಾರ ಈ ಎಲ್ಲಾ ಬದಲಾವಣೆಗಳಿಗೆ ಕಾರಣವಾಗಿದೆ. ಸಹಕಾರಿ ಸಂಘಗಳ ಆಡಿಟ್ ಚಾರ್ಟರ್ಡ್ ಅಕೌಂಟೆಂಟ್‌ಗಳಿಂದ ನಡೆಯಬಹುದಾಗಿದ್ದರೂ ಸದರಿ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಗಳ ನೋಂದಣಿ ಮತ್ತು ನೇಮಕಾತಿ ಪ್ರಕ್ರಿಯೆಯನ್ನು ರಾಜ್ಯ ಸರ್ಕಾರದ ಸಹಕಾರಿ ಇಲಾಖೆಗೆ ವಹಿಸಿರುವ ಕಾನೂನುಬದ್ಧ ಅವಕಾಶ ಈಗ ಪ್ರಸ್ತುತ ಬಿಕ್ಕಟ್ಟೊಂದರ ಸೃಷ್ಠಿಗೆ ಕಾರಣವಾಗಿಬಿಟ್ಟಿದೆ.

ರಾಜ್ಯ ಸರ್ಕಾರವು ಸಹಕಾರಿ ಸಂಘಗಳ ಕಾಯಿದೆ ಕಲಂ 63ಕ್ಕೆ ತಂದ ಅಮೂಲಾಗ್ರ ತಿದ್ದುಪಡಿಯ ಪ್ರಕಾರ ಅರ್ಹ ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಗಳ ನೋಂದಣಿ ಪಟ್ಟಿ ತಯಾರಿಸಿ ಪ್ರತಿ ಸಹಕಾರಿ ಸಂಘಕ್ಕೆ ಗರಿಷ್ಠ ಹತ್ತು ಸಿ.ಎ. ಸಂಸ್ಥೆಗಳ ಹೆಸರನ್ನು ಸಹಕಾರಿ ಇಲಾಖೆಯ ಆಡಿಟ್ ನಿರ್ದೇಶನಾಲಯವು ನೀಡಬಹುದಾಗಿದೆ. ಅದರಂತೆ ಈ ಬಾರಿ ಪ್ರತಿ ಸಹಕಾರಿ ಸಂಘಗಳಿಗೆ ಮೂರು ಸಿ.ಎ. ಸಂಸ್ಥೆಗಳ ಹೆಸರನ್ನು ಸೂಚಿಸಲಾಗಿದೆ. ಆ ಮೂರರಲ್ಲಿ ಒಂದು ಸಿ.ಎ. ಸಂಸ್ಥೆಯನ್ನು ಆಯ್ಕೆ ಮಾಡಿ 2012–13 ನೇ ಸಾಲಿನ ಆಡಿಟ್ ಪ್ರಕ್ರಿಯೆಯನ್ನು ಸೆಪ್ಟಂಬರ್ ಒಂದನೇ ತಾರೀಖಿನೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಇಲ್ಲಿಯವರೆಗೆ ನೊಂದಾಯಿಸಲ್ಪಟ್ಟ ಸಿ.ಎ. ಸಂಸ್ಥೆಗಳ ಸಂಖ್ಯೆ: 1212ಇದ್ದು, 2012–13 ನೇ ಸಾಲಿಗೆ ಸುಮಾರು 35069 ಸಂಖ್ಯೆಯ ಸಹಕಾರ ಸಂಘಗಳು ಸೆಪ್ಟಂಬರ್ ಒಂದನೇ ತಾರೀಖಿನೊಳಗೆ ಸಂಪೂರ್ಣವಾಗಿ ಆಡಿಟ್ಟಾಗಬೇಕಾಗಿರುವ ಆತಂಕಕಾರಿ ಸನ್ನಿವೇಶ ಎದುರಾಗಿದೆ. ಸಹಕಾರಿ ಸಂಘಗಳು ಮತ್ತು ಅದರ ಪದಾಧಿಕಾರಿಗಳು ತೀರಾ ಇತ್ತೀಚಿನವರೆಗೆ ರಾಜ್ಯ ವಿಧಾನ ಸಭಾ ಚುನಾವಣೆಯ ನೀತಿ ಸಂಹಿತೆಯ ಹಿಡಿತದಲ್ಲಿದ್ದುದರಿಂದ ಚುನಾವಣಾ ವೇಳೆಯಲ್ಲಿ ಆಡಳಿತ ಮಂಡಳಿ ಸಭೆ ನಡೆಸಿ ನಿರ್ಣಯ ಕೈಗೊಳ್ಳುವುದನ್ನು ಮುಂದೂಡಿದ್ದರ ಫಲವಾಗಿ ಇಲ್ಲಿಯವರೆಗೂ ಆಡಿಟರುಗಳ ನೇಮಕಾತಿ ಆಗಿಲ್ಲ. ಆಡಿಟ್ ನಿರ್ದೇಶನಾಲಯ ನೀಡಿದ ಮೂರು ಆಡಿಟರುಗಳ ಸೂತ್ರಕ್ಕೆ ಕವಡೆ ಕಾಸಿನ ಕಿಮ್ಮತ್ತು ಇಲ್ಲದಂತಾಗಿದೆ. ಯಾರು ಹಿತವರು ನಿನಗೆ ಈ ಮೂವರೊಳಗೆ ಎಂಬ ದಾಸರ ಪ್ರಶ್ನೆಯ ಮಾರ್ದನಿಯೆಂಬಂತೆ ಸಹಕಾರಿ ಸಂಘದವರಿಗೆ ಮೂವರು ಸಿ.ಎ.ಗಳಲ್ಲಿ ಮಿತವ್ಯಯದಲ್ಲಿ ಹಿತವಾಗಿ ಆಡಿಟ್ ಮಾಡಿಕೊಡಬಲ್ಲ ಒಬ್ಬರನ್ನು ಆಯ್ಕೆ ಮಾಡಿಕೊಳ್ಳಬೇಕಾದ ಇತಿಮಿತಿ ಮತ್ತು ಅನಿವಾರ್ಯತೆಯನ್ನು ಇಲಾಖೆ ಹುಟ್ಟುಹಾಕಿದೆ. ಕೆಲ ಸಹಕಾರಿ ಸಂಘದವರು ಮತ್ತು ಸಿ.ಎ. ಸಂಸ್ಥೆಯವರು ತಮ್ಮ ವೈಯಕ್ತಿಕ ಹಿತಾಸಕ್ತಿಯ ಮೇರೆಗೆ ರಾಜ್ಯ ಹೈಕೋರ್ಟಿನಲ್ಲಿ ದಾವೆ ಹೂಡಿದ್ದು, ಸಹಕಾರಿ ಆಡಿಟ್ ನಿರ್ದೇಶನಾಲಯದ ರೀತಿ ನೀತಿಗಳನ್ನು ಮತ್ತು ನೋಂದಣಿ ಪ್ರಕ್ರಿಯೆಯನ್ನು ಪ್ರಶ್ನಿಸಿದ್ದಾರೆ. ಈ ಬಗ್ಗೆ ಮಧ್ಯಂತರ ಆದೇಶಗಳು ಬಂದಿದ್ದು, ಈಗಿನ ಗೊಂದಲಕಾರಿ ಪರಿಸ್ಥಿತಿಗೆ ಮತ್ತಷ್ಟು ಇಂಬು ಕೊಟ್ಟಂತಾಗಿದೆ.

ಇತ್ತ ಸಹಕಾರಿ ಸಂಘಗಳ ದಿವ್ಯ ನಿರ್ಲಕ್ಷ ಅತ್ತ ಸಿಎ ಸಂಸ್ಥೆಗಳ ನಿರ್ಲಿಪ್ತ ನಿಲುವಿನಿಂದಾಗಿ ಸಹಕಾರಿ ಸಂಘಗಳ ಆಡಿಟ್ ನಿರ್ದೇಶ ನಾಲಯ ಇಕ್ಕಟ್ಟಿಗೊಳಗಾಗಿದೆ. ಸಹಕಾರಿ ಸಂಘಗಳ ಕಾಯಿದೆ ಕಲಂ 63ಕ್ಕೆ ತಿದ್ದುಪಡಿ ತರುವ ಸಂದರ್ಭದಲ್ಲಿ ಯಾವುದೇ ರೀತಿಯ ಮುಂದಾಲೋಚನೆ ಮಾಡದೆ ಮತ್ತು ಸಿ.ಎ. ಸಂಸ್ಥೆಯ ಅಧಿಕೃತ ಪದಾಧಿಕಾರಿಗಳು ಮತ್ತು ಪ್ರತಿನಿಧಿಗಳೊಂದಿಗೆ ಸಮಾಲೋಚನೆ ಮಾಡದೆ ಏಕಾಏಕಿಯಾಗಿ ತಮ್ಮ ವಿವೇಚನೆಗೆ ತೋರಿದಂತೆ ತಿದ್ದುಪಡಿಯನ್ನು ತಂದು ಅದನ್ನು ಸಹಕಾರಿ ಸಮುದಾಯದ ಮೇಲೆ ಹೇರ ಹೊರಟಿರುವ ಅಧಿಕಾರಿಶಾಹಿಯ ಧೋರಣೆಯೇ 2012–13ನೇ ಸಾಲಿನ ಆಡಿಟ್ ಪ್ರಕ್ರಿಯೆ ಎಡವಟ್ಟಾಗಿರುವುದಕ್ಕೆ ಕಾರಣವಾಗಿದೆ. ಈ ಬಗ್ಗೆ ದಿನಪತ್ರಿಕೆಗಳ ವಾಚಕರವಾಣಿ ಕಾಲಮ್ಮಿನಲ್ಲಿ ಪ್ರತಿಕ್ರಿಯೆಗಳು ಪ್ರಕಟವಾಗಿದ್ದು, ಆಡಿಟ್ ನಿರ್ದೇಶನಾಲಯ ಸಮಜಾಯಿಷಿ ನೀಡಲು ಹೆಣಗಾಡುತ್ತಿದೆ.

ಸಹಕಾರ ಸಂಘಗಳ ಲೆಕ್ಕಪತ್ರಗಳ ಆಡಿಟ್ ಒತ್ತಟ್ಟಿಗಿರಲಿ, ಆಡಿಟ್ ನಿರ್ದೇಶನಾಲಯದ ನೋಂದಣಿ ಪ್ರಕ್ರಿಯೆ ಮತ್ತು ಸಹಕಾರಿ ಸಂಘಗಳಿಗೆ ಆಡಿಟರುಗಳ ನೇಮಕಾತಿಯ ಪ್ರಕರಣವೇ ಆಡಿಟ್‌ಗೆ ಒಳಗಾಗಬೇಕಾದ ಗೊಂದಲಮಯ ಸನ್ನಿವೇಶ ಇಂದು ಇಡೀ ಸಹಕಾರಿ ಕ್ಷೇತ್ರದ ಮುಂದಿದೆ. ■



# ಆಸರೆ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಪ್ರಥಮ ವಾರ್ಷಿಕೋತ್ಸವ



**ಸಿಂಧನೂರು :** ಆಸರೆ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಪ್ರಥಮ ವಾರ್ಷಿಕೋತ್ಸವವನ್ನು ವಿಭಿನ್ನವಾಗಿ, ವಿಶಿಷ್ಠ ಸಾಧನೆಗೈದ ಸಾಧಕರಿಗೆ ಸನ್ಮಾನ ಮಾಡುವ ಮೂಲಕ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಎಸ್.ಆರ್ ಸತೀಶ್‌ಚಂದ್ರ ಇವರ ಸಮ್ಮುಖದಲ್ಲಿ ಆಚರಿಸಿಕೊಂಡಿತು. ಸೌಹಾರ್ದ ಸಹಕಾರಿಗಳು ಕೇವಲ ಹಣಕಾಸಿನ ವ್ಯವಹಾರಕ್ಕೆ ಸೀಮಿತವಾಗಿರದೇ ವಿವಿಧ ಯೋಜನೆಗಳನ್ನು ಯಶಸ್ವಿಯಾಗಿ ಲಾಭದಾಯಕವಾಗಿ ನಡೆಸಿಕೊಂಡು ಬಂದಿವೆ, ಆಸರೆ ಸೌಹಾರ್ದವು ಕೂಡ ಈ ನಿಟ್ಟಿನಲ್ಲಿ ಮುಂದುವರೆಯಲಿ ಎಂದು ಶ್ರೀಯುತ ಸತೀಶ್ಚಂದ್ರರವರು ಹಾರೈಸಿದರು. ಸಾನಿಧ್ಯವಹಿಸಿದ್ದ ರಂಭಾಪುರಿಪೀಠದ ಪೂಜ್ಯಗುರುಗಳಾದ ಶ್ರೀ ಷ ಬ್ರ ಸೋಮನಾಥ ಶಿವಚಾರ್ಯರು ಮಾತನಾಡಿ ತಾಯಿ-ಮಗುವಿಗೆ ಆಸರೆಯಾದಂತೆ ಸಹಕಾರಿ ಕ್ಷೇತ್ರ ಆರ್ಥಿಕವಾಗಿ ಎಲ್ಲ ವರ್ಗದವರಿಗೂ ಆಸರೆಯಾಗಿದೆ ಎಂದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಶ್ರೀಮತಿ ಮಂಜುಳಾ ಪಾಟೀಲ್ ಮಾತನಾಡಿ ಕೈಯಲ್ಲಿನ ಐದು ಬೆರಳುಗಳಂತೆ ಸಹಕಾರ ತತ್ವದಡಿ ಕೆಲಸ ನಿರ್ವಹಿಸಲಿ ಆಸರೆ ಸೌಹಾರ್ದ ಎಂದು ಹಾರೈಸಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಆಸರೆ ಸೌಹಾರ್ದದ ಅಧ್ಯಕ್ಷರಾದ ಶ್ರೀ ಹಾಲಯ್ಯ ಶೇ.ಹಿರೇಮಠ ಮಾತನಾಡಿ, ಸಮಾಜಮುಖಿಯಾಗಿ ಕೆಲಸ ಮಾಡಿದಾಗ ಸಿಗುವ ತೃಪ್ತಿ ಬೆಲೆ ಕಟ್ಟಲಾಗದ್ದು ಎಂದರು. ಶ್ರೀ ವೈಜನಾಥ ನಿರೂಪಿಸಿ ಶ್ರೀ ಗೋಪಾಲಕೃಷ್ಣ ವಂದಿಸಿದರು.

## ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ

97ನೇ ಸಂವಿಧಾನ ತಿದ್ದುಪಡಿಗೆ ಅನುಗುಣವಾಗಿ ತಿದ್ದುಪಡಿ ಗೊಂಡಿರುವ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕೆಲವೊಂದು ಪ್ರಾವಧಾನಗಳು ಸೌಹಾರ್ದ ಸಹಕಾರಿಗಳಿಗೆ ತೀವ್ರವಾದ ಪ್ರಾಯೋಗಿಕವಾಗಿ ಕಾರ್ಯಾಚರಣೆಯ ಸಮಸ್ಯೆಗೆ ಕಾರಣವಾಗಿರುತ್ತದೆ ಮತ್ತು ಸೌಹಾರ್ದ ಸಹಕಾರಿ ಚಳುವಳಿಗೆ ಧಕ್ಕೆ ಉಂಟುಮಾಡುವ ಸ್ವರೂಪದ್ದಾಗಿರುತ್ತದೆ. ಇದನ್ನು ಮನಗಂಡಿರುವ ರಾಜ್ಯದ ಹಲವಾರು ಸೌಹಾರ್ದ ಸಹಕಾರಿಗಳು ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ದಾಖಲಿಸಲು ನಿರ್ಣಯಿಸಿರುತ್ತಾರೆ. ಸಂಯುಕ್ತ ಸಹಕಾರಿಯು ಈ ಕುರಿತಂತೆ ಕಾನೂನು ಸಲಹೆ ಹಾಗೂ ಮಾರ್ಗದರ್ಶನವನ್ನು ಸದಸ್ಯ ಸಹಕಾರಿಗಳಿಗೆ ಒದಗಿಸಿದೆ.

**ವಿಷಯಗಳು :**

1) ಸಹಸದಸ್ಯತ್ವ.
2) ನಾಮಮಾತ್ರ ಸದಸ್ಯತ್ವ.
3) ಲೆಕ್ಕಪರಿಶೋಧನೆ.
4) ನಿರ್ದೇಶಕರ ಅನರ್ಹತೆ.
5) ಗೃಹ ನಿರ್ಮಾಣ ಸಹಕಾರಿಯಾಗಿ ನೋಂದಣಿಯಾಗಲು ಅಥವಾ ಪರಿವರ್ತನೆ ಹೊಂದಲು ಇರುವ ಅಡೆತಡೆ.
6) ನೋಂದಣಿ ಪೂರ್ವದಲ್ಲಿ ಸಹಕಾರಿಯು ಯಶಸ್ವಿಯಾಗುವ ಕುರಿತು ನಿಬಂಧಕರ ಅಭಿಪ್ರಾಯ.
7) ಆಡಳಿತ ಮಂಡಲಿಗೆ ಮೀಸಲಾತಿ.
8) ಸಾಮಾನ್ಯ ಸಭೆಗೆ ಕೋರಂ ಶೇಕಡ 20 ಎಂದು ನಿಗದಿಪಡಿಸಿರುವುದು.







## ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನಲ್ಲಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವಿಶೇಷ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರ

# ಎಲ್ಲರ ತಲುಪಿದ ಸಹಕಾರಿ ಕ್ಷೇತ್ರ : ಆರ್ ಎನ್ ಹೆಗಡೆ, ಗೋರ್ಸಗದ್ದೆ



9ನೇ ತಂಡದ ವ್ಯಕ್ತಿತ್ವ ವಿಕಸನತರಬೇತಿ ಕಾರ್ಯಕ್ರಮದ ಉದ್ಘಾಟನೆ ಸಹಕಾರಿ ಗಣ್ಯರಿಂದ

**ಯಲ್ಲಾಪುರ :** ದಿನಾಂಕ : 30.05.2013 ರಿಂದ 08.06.2013ರವರೆಗೆ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಇಡಗುಂದಿಯ ಸ್ನೇಹಸಾಗರ ವಸತಿ ಶಾಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗಾಗಿ ಹಮ್ಮಿಕೊಂಡ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರವನ್ನು ಹಿರಿಯ ಸಹಕಾರಿ, ಟಿಎಂಎಸ್ ಅಧ್ಯಕ್ಷ ಶ್ರೀ ಆರ್.ಎನ್. ಹೆಗಡೆ ಗೋರ್ಸಗದ್ದೆ ಇವರು ಉದ್ಘಾಟಿಸಿ ಮಾತನಾಡುತ್ತಾ ಸಹಕಾರಿ ಕ್ಷೇತ್ರದಷ್ಟು ಜನರನ್ನು ತಲುಪುವ ಕ್ಷೇತ್ರ ಬೇರೊಂದಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲೂ ಸಹಕಾರಿ ಕ್ಷೇತ್ರ ಅಸ್ತಿತ್ವದಲ್ಲಿತ್ತು. ಆರ್ಥಿಕ ಕ್ಷೇತ್ರದ ಪರಿಧಿಯೊಳಗೆ ಸಹಕಾರಿ ಕ್ಷೇತ್ರ ವಿಶಿಷ್ಟ ಛಾಪು ಮೂಡಿಸಿದೆ ಎಂದು ಹೇಳಿದರು. ಸಹಕಾರಿ ಅಥವಾ ಆರ್ಥಿಕ ಸಂಸ್ಥೆಗಳ ಬೆಳವಣಿಗೆ ನೌಕರರ ಪ್ರಾಮಾಣಿಕತೆ ಹಾಗೂ ಜವಾಬ್ದಾರಿಗಳನ್ನು ಅವಲಂಬಿಸಿರುತ್ತದೆ. ತರಬೇತಿ ಪಡೆದ ಅನುಭವೀ ಸಿಬ್ಬಂದಿಯನ್ನು ಹೊಂದಿರುವ ಸಂಸ್ಥೆ ಬೆಳವಣಿಗೆಯಲ್ಲಿ ದಾಪುಗಾಲಿಡುತ್ತ ಮುನ್ನಡೆಯುತ್ತದೆ. ಆರ್ಥಿಕವಾಗಿ ಸಂಸ್ಥೆಯೂ ಬಲಗೊಳ್ಳುವ ಜತೆಗೆ ಜನರಿಗೂ ಅನುಕೂಲತೆ ಒದಗಿಸುವಂತಾಗಬೇಕು ಎಂದರು.

ಸಹಕಾರಿ ಸಂಘಗಳು ಗ್ರಾಹಕರ ಬೇಡಿಕೆಗೆ ತಕ್ಕಂತೆ ಹಲವು ಸೌಲಭ್ಯ ಕೊಡಬಹುದಾಗಿದೆ. ಅನೇಕ ಸಂಸ್ಥೆಗಳು ಇಂತಹ ವಿಶೇಷ ಹಾಗೂ ವಿನೂತನ ಚಟುವಟಿಕೆ ನಡೆಸಿರುವುದನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಮುಖವಾಗಿ ಕಾಣುತ್ತೇವೆ. ಹಿಂದೆ ಸಿಬ್ಬಂದಿಗಳು ತಾವು ಪಡೆದ ಅನುಭವದ ಆಧಾರದ ಮೇಲೆ ಉನ್ನತ ಹಂತವನ್ನು ತಲುಪಬೇಕಿತ್ತು. ಆದರೆ, ಈಗ ಜಾಗತಿಕ ಬದಲಾವಣೆಗೆ ತಕ್ಕಂತೆ ಸಿಬ್ಬಂದಿಯನ್ನು ಸಜ್ಜುಗೊಳಿಸುತ್ತಿರುವ ಸಂಯುಕ್ತ ಸಹಕಾರಿಯ ಕಾರ್ಯ ಶ್ಲಾಘನೀಯ ಎಂದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಜಿಲ್ಲಾ ಉಪನಿಬಂಧಕರಾದ ಶ್ರೀ ಎಸ್.ಐ. ಗಿರಡ್ಡಿ ಮಾತನಾಡಿ, ತರಬೇತಿ ಪಡೆಯುವವರು ಆಸಕ್ತಿ ವಹಿಸಿ, ತಾವು ಕಾರ್ಯ ನಿರ್ವಹಿಸುವ ಸಂಸ್ಥೆಯ ಬೆಳವಣಿಗೆಗೆ ಅನುಕೂಲಕರವಾದ ವಿಷಯವನ್ನು ಅರ್ಥೈಸಿಕೊಳ್ಳಬೇಕು. ಆರ್ಥಿಕ ಕ್ಷೇತ್ರ ಹಾಗೂ ಬ್ಯಾಂಕ್ ವ್ಯವಸ್ಥೆಯಲ್ಲಿ ಸಾಕಷ್ಟು ಸ್ಪರ್ಧೆ, ಸವಾಲುಗಳಿರುವ ಕಾರಣ ತರಬೇತಿಗಳು ಅತ್ಯಗತ್ಯ. ಆಡಳಿತ ಸಮಿತಿ ಮತ್ತು ಸಿಬ್ಬಂದಿ ಒಂದೇ ನಾಣ್ಯದ ಎರಡು ಮುಖದಂತೆ ಕೆಲಸ ಮಾಡಿದಾಗ ಸಂಸ್ಥೆಯ ಉದ್ದೇಶ ಸಫಲಗೊಳ್ಳುತ್ತದೆ ಎಂದರು.











ತರಬೇತಿಯಲ್ಲಿ ಆಡಳಿತ ಮಂಡಳಿಯನ್ನು ನಡೆಸುವ ವಿಧಾನವನ್ನು ಪ್ರಾಯೋಗಿಕವಾಗಿ ನಡೆಸುತ್ತಿರುವ ಶಿಬಿರಾರ್ಥಿಗಳು



ಪ್ರವಾಸಿತಾಣಗಳಲ್ಲಿ ಅಧ್ಯಯನ

**ಸರ್ಕಾರದ ಹಸ್ತಕ್ಷೇಪ ಕಾರಣ :** ಯು.ಕೆ. ಸೌಹಾರ್ದ ಸಹಕಾರಿ ನಿಯಮಿತದ ಅಧ್ಯಕ್ಷರಾದ ಶ್ರೀಯುತ ಪ್ರಮೋದ್ ಹೆಗಡೆ ಮಾತನಾಡಿ, ಸಹಕಾರಿ ಕ್ಷೇತ್ರ ಸರ್ಕಾರ ಬಜೆಟ್‌ಗೆ ನೀಡುವ ಹಣಕ್ಕಿಂತಲೂ ದೊಡ್ಡ ಮೊತ್ತವನ್ನು ನಿಯಂತ್ರಿಸುತ್ತಿದೆ. ಸಹಕಾರಿ ಹಾಗೂ ಸೌಹಾರ್ದಕ್ಕಿರುವ ವ್ಯತ್ಯಾಸ ತಿಳಿಯಿರಿ. ಸಹಕಾರಿ ಚಳುವಳಿ ಕೆಡುವುದಕ್ಕೆ ಸರ್ಕಾರದ ನೀತಿ ಮತ್ತು ಮಧ್ಯ ಪ್ರವೇಶವೇ ಕಾರಣ. ಪದೇ ಪದೇ ಸಹಕಾರಿ ನಿಯಮಾವಳಿಗಳಿಗೆ ತಿದ್ದುಪಡಿ ತರುವುದು ಅಥವಾ ಹಸ್ತಕ್ಷೇಪ ಮಾಡಿದ್ದರಿಂದ ಈ ಕ್ಷೇತ್ರ ಕುಂಠಿತಗೊಂಡಿದೆ. ಸಹಕಾರಿ ಸಂಘಗಳಿಗೆ ಮಾರಕವಾದ ನಿಯಮಾವಳಿಗಳನ್ನು ಸರ್ಕಾರ ಜಾರಿಗೆ ತಂದರೆ ಸಹಕಾರಿಗಳು ಅಂತಹ ಪ್ರಮುಖ ಸಂಗತಿಗಳ ವಿರುದ್ಧ ಧ್ವನಿ ಎತ್ತಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್ಚಂದ್ರರವರು ಮಾತನಾಡಿ, ಜಾಗತೀಕರಣದ ಕಪಿಮುಷ್ಟಿಯಿಂದ ಹೊರಬರಬೇಕಾದರೆ ಸಹಕಾರಿ ಸಂಸ್ಥೆಗಳು ಗಟ್ಟಿಯಾಗಿ ನೆಲೆ ನಿಲ್ಲಬೇಕಾಗಿದೆ ಎಂದರು.

ಹಿರಿಯ ಸಹಕಾರಿ ಪಿ.ಜಿ. ಹೆಗಡೆ ಕಳಚೆಯವರು ಉಪಸ್ಥಿತರಿದ್ದರು. ಸ್ನೇಹಸಾಗರ ಶಾಲಾ ವಿದ್ಯಾರ್ಥಿನಿಯರು ಪ್ರಾರ್ಥಿಸಿದರು, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಪ್ರಾಸ್ತಾವಿಕ ಮಾತನಾಡಿ ಹತ್ತು ದಿನಗಳ ಕಾಲದಲ್ಲಿ ಪ್ರತಿನಿಧಿಗಳು ವಿದ್ಯಾರ್ಥಿಗಳ ಮನಸ್ಥಿತಿಯನ್ನು ಹೊಂದಿ ತರಬೇತಿಯಲ್ಲಿ ಪೂರ್ಣವಾಗಿ ಭಾಗವಹಿಸಲು ತಿಳಿಸಿದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ನಿರ್ದೇಶಕರಾದ ಶ್ರೀ ಭಾಸ್ಕರ್ ಹೆಗಡೆ, ಕಾಗೇರಿಯವರು ಸ್ವಾಗತಿಸಿದರು. ಶಿಬಿರದ ಸಂಘಟಕರಾದ ಶ್ರೀ ವಿ.ಜೆ. ಕಾರ್‌ಕೂನ್‌ರವರು ನಿರೂಪಿಸಿದರು. ಸ್ನೇಹಸಾಗರ ಶಿಕ್ಷಣ ಸಂಸ್ಥೆಯ ರೂವಾರಿಯಾದ ಶ್ರೀ ಎಸ್.ಎಲ್.ಭಟ್ಟರವರು ವಂದಿಸಿದರು.



ತರಬೇತಿಯಲ್ಲಿ ಪಾಲ್ಗೊಂಡ ಶಿಬಿರಾರ್ಥಿಗಳು





## ಸ್ವಾಭಿಮಾನಿ ಸಹಕಾರಿ ಅನಿಸಿಕೆ – ಅಭಿಪ್ರಾಯ

### ಹೆಚ್ಚು ಸಹಕಾರಿ

ಅತ್ಯಂತ ವೇಗದಲ್ಲಿ ಸಾಗುತ್ತಿರುವ ಆರ್ಥಿಕ ಚಟುವಟಿಕೆಗಳ ಬಗ್ಗೆ ನಿರಂತರ ಹಾಗೂ ಸಕಾಲದಲ್ಲಿ ವಿವರಗಳನ್ನು ನೀಡುತ್ತಾ, ಎಲ್ಲಾ ಸಹಕಾರಿ ಉತ್ತಮ ಬೆಳವಣಿಗೆ ತುಂಬಾ ಸಹಕಾರಿಯಾಗಿರುತ್ತದೆ. ಆದ್ದರಿಂದ ಇದೇ ರೀತಿ ಇನ್ನು ಹೆಚ್ಚಿನ ವಿವರಗಳನ್ನು ನೀಡುತ್ತಾ ಈ ಕ್ಷೇತ್ರದ ಬೆಳವಣಿಗೆ ಸಹಕರಿಸುತ್ತೀರಿ ಎಂದು ಹಾರೈಸುತ್ತೇವೆ.

**– ಮುರಿಗೆಪ್ಪ ಸರಶೆಟ್ಟಿ , ಉಪಾಧ್ಯಕ್ಷರು ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ತಾಳಿಕೋಟೆ**

### ಅರ್ಥಪೂರ್ಣ ಲೇಖನ

ವೃತ್ತಿ ನಿರತ ಮಹಿಳೆ ಆತ್ಮವಿಶ್ವಾಸದ ಗಣಿ ಎಂಬ ಲೇಖನವು ವಾಸ್ತವಿಕವಾಗಿ ನಡೆಯುವ ವಿಚಾರವನ್ನು ಲೇಖನ ರೂಪದಲ್ಲಿ ನೀಡಿ ಮತ್ತೊಮ್ಮೆ ಮಹಿಳೆಗೆ ಆತ್ಮ ವಿಶ್ವಾಸವನ್ನು ಮೂಡಿಸಿದೆ ಹಾಗೂ ಆರ್‌ಐ ಸಿಎಂ ವೆಬ್ ತಾಣದಿಂದ ಎನ್ನೆಲ್ಲ ಉತ್ತಮ ಮಾಹಿತಿಗಳು ಪಡೆಯಬಹುದೆಂದು ಸ್ವಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಿರುವುದು ಶ್ಲಾಘನೀಯ. **– ಅನಿತ ಶಿರಾಳಕೊಪ್ಪ**

### ಶ್ಲಾಘನೀಯ

ಸ್ವಾಭಿಮಾನಿ ಸಹಕಾರಿ ಪತ್ರಿಕೆಯು ಹೆಸರೇ ಸೂಚಿಸು ವಂತೆ ಸೌಹಾರ್ದ ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಅನುಕೂಲಕಾರಿ ಯಾಗಿರುತ್ತದೆ.

ತ್ವರಿತವಾಗಿ ಕಾನೂನಿನ ಮಾಹಿತಿಯನ್ನು ಒದಗಿಸುತ್ತಿದೆ. ಪ್ರತಿಯೊಂದು ಸೌಹಾರ್ದ ಸಹಕಾರಿಗಳಿಗೆ ಆಡಳಿತದಲ್ಲಿ ನಿಪುಣತೆಗಾಗಿ ಅನೇಕ ಪ್ರೋತ್ಸಾಹಿಕ ಲೇಖನಗಳನ್ನು ಪ್ರಕಟಿಸಿ ಸಹಕಾರಿಗಳ ಅಭಿವೃದ್ಧಿಯಲ್ಲಿ ತನ್ನ ಪಾತ್ರವಹಿಸುವಲ್ಲಿ ಪ್ರಮುಖವಾಗಿದೆ.

**ಸಲಹೆ :** ಸ್ವಾಭಿಮಾನಿ ಪತ್ರಿಕೆಯು ತಿಂಗಳಿಗೊಮ್ಮೆ ಪ್ರಕಟವಾಗುವುದಕ್ಕಿಂತ 15 ದಿನಕ್ಕೆ ಒಮ್ಮೆ ಪ್ರಕಟವಾದರೆ ಸೌಹಾರ್ದ ಸಹಕಾರಿಗಳಿಗೆ ಉತ್ತಮ ಮಾರ್ಗದರ್ಶಿಯಾಗಿರುತ್ತದೆ.

**– ರಾಜಶೇಖರ್ ಪಿ.ಜಿ., ಉಪಾಧ್ಯಕ್ಷರು, ಜಂಗಮ ಸೌಹಾರ್ದ ದಾವಣಗೆರೆ.**

### ಅಭಿನಂದನೆ



ತುಮಕೂರು ಜಿಲ್ಲಾ ಬಂಜಾರ ಸೌಹಾರ್ದ ಪತ್ತಿನ ಸಹಕಾರ ನಿ., ಇದರ ಸದಸ್ಯರಾದ ಶ್ರೀ ಸುಧಾಕರ್ ಲಾಲ್‌ರವರು ವಿಧಾನ ಸಭೆಗೆ ಆಯ್ಕೆಯಾಗಿರುತ್ತಾರೆ. ಇವರಿಗೆ ಸಂಯುಕ್ತ ಸಹಕಾರಿಯು ಅಭಿನಂದಿಸುತ್ತದೆ.

### ಅರಿಹಂತ ಅರ್ಬನ್ ಸೌಹಾರ್ದಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿ ಸಹಕಾರಿಯ 31.03.2013ರಂತೆ ವಿವರ :

ಶೇರು ಬಂಡವಾಳ – ರೂ 34,27,490/–, ಕಾಯ್ದಿಟ್ಟ ನಿಧಿ–ರೂ 2,74,22,498/–, ಠೇವುಗಳು – ರೂ30,96,02,525/– ಸಾಲಗಳು–ರೂ17,68,81,711/–, ನಿವ್ವಳ ಲಾಭ–ರೂ54,15,618/–, ದುಡಿಯುವ ಬಂಡವಾಳ–ರೂ34,19,76,525/–, ಸದಸ್ಯರ ಸಂಖ್ಯೆ–3982, ಸಾಲ ವಸೂಲಾತಿ–97% ಇರುತ್ತದೆ.



**ಬೀಳ್ಕೊಡುಗೆ :** ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ಶ್ರೀನಿವಾಸಯ್ಯ ಇವರು ಆರ್ಥಿಕ ಹಾಗೂ ಸಾಂಖಿಕ ಇಲಾಖೆಯಲ್ಲಿ ಹುದ್ದೆಯನ್ನು ಪಡೆದಿರುತ್ತಾರೆ. ಇವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಹಾಗೂ ಸಿಬ್ಬಂದಿವರ್ಗವು ಬೀಳ್ಕೊಟ್ಟು ಶುಭ ಹಾರೈಸಿದರು.

# ವೃತ್ತಿ ನಿರತ ಮಹಿಳೆ ಆತ್ಮವಿಶ್ವಾಸದ ಗಣಿ



ಸವಿತ ಎನ್.ಇ., ಬೆಂಗಳೂರು.

...ಹಿಂದಿನ ಸಂಚಿಕೆಯಿಂದ

ಎಷ್ಟೋ ಸಂದರ್ಭದಲ್ಲಿ ಬೆವರಳಿಸಿ ದುಡಿದರೂ ಶ್ರಮದ ಪ್ರತಿಫಲವನ್ನು ಅನುಭವಿಸಲಾಗದ ದುಸ್ಥಿತಿ ಮಹಿಳೆಯದು. ಸಿರಿವಂತ ಕುಟುಂಬದ ಮಹಿಳೆ ಇಲ್ಲಿ ಸ್ವಲ್ಪ ಸ್ವತಂತ್ರಳು. ಮಧ್ಯಮ ವರ್ಗದ ಹಾಗೂ ಬಡ ಕುಟುಂಬಗಳಲ್ಲಿ ಅವಳ ದುಡಿಮೆ ತಂದೆ, ಗಂಡ ಅಥವಾ ಮಗನ ಪಾಲು, ಪುರುಷ ಕುಡುಕನಾಗಿದ್ದರೆ ಮಹಿಳೆಯ ಗಳಿಕೆಯ ಬಹುಪಾಲು ಕುಡುತಕ್ಕೇ ಎಂಬುದು ನಮ್ಮ ಸ್ತ್ರೀ ಚರಿತ್ರೆಯ ಬಹುದೊಡ್ಡ ದುರಂತ, ದುಡಿದರೂ ನೆಮ್ಮದಿ ಸಿಗದ ಹೀನಾಯ ಸ್ಥಿತಿ ಅವಳದು. ದುಡಿಯುವ ಮಹಿಳೆಯ ಮುಂದಿರುವ ಇನ್ನೊಂದು ಪ್ರಶ್ನೆ ಸಂಸಾರದಲ್ಲಿನ ಸ್ಥಾನಮಾನದ್ದು. ಮನೆಯಿಂದ ಹೊರಬಂದು, ಸಮಾಜದಲ್ಲಿ ಬೆರೆತ ಅವಳ ತಿಳಿವು ಹೊಸ ಸಮಸ್ಯೆಗಳ ಹುಟ್ಟಿಗೆ ಕಾರಣ. ಆಕೆ ಭಾವಜೀವಿಯಲ್ಲ; ಗಂಡನ ಎಲ್ಲ ನಡತೆಗೆ ಬೆಲೆ ಕೊಡುವುದಿಲ್ಲ. ಅವಳ ಪ್ರಶ್ನಿಸುವ ಸ್ವಭಾವವನ್ನು ಗಂಡು ಒಪ್ಪುವುದಿಲ್ಲ. ಅವಳ ಸ್ವಂತಿಕೆ, ಸಾಮಾಜಿಕ ಮನ್ನಣೆಗಳನ್ನು ಸಂಕುಚಿತ ಪುರುಷ ಮನಸ್ಸು ಸಹಿಸುವುದಿಲ್ಲ. ಪರಿಣಾಮ, ಸಂಸಾರದಲ್ಲಿ ಅಪಸ್ವರ; ಪರಿಹಾರ ವಿಚ್ಛೇದನ! ಈ ಹಂತದಲ್ಲಿ ಪುರುಷ ಮನಸ್ಸುಗಳು ಪ್ರಧಾನತೆಯ ಪ್ರಶ್ನೆ ಬಿಟ್ಟು, ಸಮಾನತೆಯನ್ನು ಒಪ್ಪಿಕೊಳ್ಳಬೇಕಾದುದು ಅತ್ಯಗತ್ಯ.

ಮಹಿಳೆಯ ಮತ್ತೊಂದು ನೋವೆಂದರೆ, ವಿಶ್ರಾಂತಿ ರಹಿತ ದಿನಚರಿಯಿಂದಾಗುವ ಆಯಾಸ. ಮನೆ–ಮಕ್ಕಳ ನಿರ್ವಹಣೆ ತನ್ನ ಹೊಣೆ ಎಂದೇ ಭಾವಿಸುವ ಆಕೆ ಎಲ್ಲೂ ಕರ್ತವ್ಯ ಲೋಪವಾಗದಂತೆ ಎಚ್ಚರವಹಿಸುತ್ತಾಳೆ. ಪರಿಣಾಮ ದೈಹಿಕ ದಣಿವು, ಮಾನಸಿಕ ಒತ್ತಡ, ಆತಂಕ. ಆಗೆಲ್ಲಾ ಕೊಂಚ ಸಾಂತ್ವನ ಸಿಕ್ಕಿದರೂ ಅವಳು ನಿರಾಳ. ಪತಿ ತನ್ನ ಬಗ್ಗೆ ಸ್ವಲ್ಪ ಕಾಳಜಿ ತೋರಿದರೂ ಅವಳಲ್ಲಿ ಧನ್ಯತೆ, ಮೆಚ್ಚಿದರೆ ಸಾರ್ಥಕತೆ, ನಿನ್ನೊಂದಿಗೆ ನಾನಿರುವೆನೆಂದು ಭರವಸೆಯಿತ್ತರೆ ಭದ್ರತೆ. ಇದೆ ಅಂತರಾಳದ ಆಕಾಂಕ್ಷೆ, ನಿಟ್ಟುಸಿರಿನ ನಿರೀಕ್ಷೆ. ಹೀಗೆ ಉದ್ಯೋಗಸ್ಥ ಮಹಿಳೆ ಯಶಸ್ವೀ ಮಹಿಳೆಯಾಗುವಲ್ಲಿ ಹಲವು ಸಮಸ್ಯೆಗಳು, ಮೇಲ್ನೋಟಕ್ಕೆ ಸಮರ್ಥಳು, ಒಳಗೆ ಜಂಜಾಟಗಳು. ಏನೋ ಗಳಿಸಿದ ತೃಪ್ತಿ, ಒಳಗೆಲ್ಲ ಅತೃಪ್ತಿ. ಸಹೋದರನಾಗಿ, ತಂದೆಯಾಗಿ, ಪತಿಯಾಗಿ, ಸ್ನೇಹಿತನಾಗಿ, ಸಹೋದ್ಯೋಗಿಯಾಗಿ ಆದರ್ಶ ಪುರುಷ ಸಿಕ್ಕಿದರೆ ಅವಳು ನಿಸ್ಸಂಶಯವಾಗಿ ಯಶಸ್ವಿ. ಅಂತಹ ಕೆಲವು ಜೀವಂತ ನಿದರ್ಶನಗಳನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ.

ಕೊಡಗು, ಚಿಕ್ಕಮಗಳೂರು, ಹಾಸನ, ಮಂಗಳೂರು, ಉತ್ತರ ಕರ್ನಾಟಕದಲ್ಲೂ ಹೋಂ ಸ್ಟೇ ವಿಸ್ತರಿಸುತ್ತಿದೆ ಇದರಿಂದಾಗಿಯೇ ಮಲೆನಾಡು, ಕರಾವಳಿ ಪ್ರವಾಸೋದ್ಯಮ ಬೆಳೆದಿದೆ. ವಾರ್ಷಿಕ 100 ಕೋಟಿ ರೂ.ಗೂ ಹೆಚ್ಚು ವಹಿವಾಟು ಇಲ್ಲಿ ನಡೆಯುತ್ತಿದೆ. ಉತ್ತರ ಭಾರತದ ಪ್ರವಾಸಿಗರು ರಾಜ್ಯಕ್ಕೆ ಬರಲು ಇದೂ ಒಂದು ಪ್ರಮುಖ ಕಾರಣ. ಇಂಥ ಹೋಂ ಸ್ಟೇ ಪರಿಕಲ್ಪನೆಯನ್ನು ಸ್ಥಳೀಯವಾಗಿ ಪರಿಚಯಿಸಿದವರು ಒಬ್ಬ ಕೊಡವ ಮಹಿಳೆ, ದಕ್ಷಿಣ ಕೊಡಗಿನ ನಾಗರಹೊಳೆ – ಇರ್ಪುಫಾಲ್ಸ್ ನಡುವಿನ ಮಂಚಳ್ಳಿ ಗ್ರಾಮದ ನಿವಾಸಿ ಬೊಳ್ಳೇರ ಕುಸುಮ ಡಾಲು ಈ ಕಲ್ಪನೆಯ ಶಿಲ್ಪಿ. ಇದರ ಗಂಧಗಾಳಿಯೂ ಗೊತ್ತಿಲ್ಲದ ಅವರು ಉದ್ಯಮಕ್ಕೆ ನಾಂದಿ ಹಾಡಲು ಕಾರಣವಾದದ್ದು ಒಂದು ವಿಚಿತ್ರ ಸನ್ನಿವೇಶ.

ಅದು 2001ರ ಸಮಯ, ಕಾಫಿ ಉದ್ಯಮ ಹಳ್ಳ ಹಿಡಿದಿತ್ತು. 1500 ರೂ. ದರವಿದ್ದ ಕಾಫಿ ಚೀಲ ಆಗ 350ಕ್ಕೆ ಕುಸಿದಿತ್ತು. ಕಾಫಿ ಬೆಳೆಗಾರರು ಚಿಂತಾಕ್ರಾಂತರಾಗಿದ್ದರು, ಕುಸುಮ ಕೂಡ ಸಂಜೆ ಮನೆ ಎದುರಿನ ಮರದ ಬೆಂಚ್‌ನಲ್ಲಿ ಕುಳಿತು ಭವಿಷ್ಯದ ಬಗ್ಗೆ ಯೋಚಿಸುತ್ತಿದ್ದರು. ಥಟ್ಟನೆ ಹತ್ತಡಿ ಕೆಳಗಿರುವ ರಸ್ತೆಯಿಂದ ಹೆಣ್ಣು ದನಿಯೊಂದು ಅಮ್ಮಾ ಎಂದಿತು. 'ಇವತ್ತು ನಿಮ್ಮಲ್ಲಿ ಇರಬಹುದಾ' ಎಂಬ ಮಾತು ತೂರಿ ಬಂತು. ದಿಟ್ಟಿಸಿ ನೋಡಿದಾಗ ಯುವ ಜೋಡಿಯೊಂದು ಒದ್ದೆ ಬಟ್ಟೆಯಲ್ಲಿ ಅಸಹಾಯಕತೆಯಿಂದ ನಿಂತಿತ್ತು. ಆಗ ಕುಸುಮ ಅವರಲ್ಲಿ ತಾಯಿ ಮಮತೆ ಜಾಗೃತಗೊಂಡು ಜೋಡಿಗೆ ಆಸರೆ ಕಲ್ಪಿಸಿದರು. ರಾತ್ರಿ ಮನೆ ಊಟ ಬಡಿಸಿ, ತಮ್ಮ ಇನ್ನೊಂದು ಮಲಗುವ ಕೋಣೆ ಬಿಟ್ಟು ಕೊಟ್ಟರು. ದಟ್ಟ ಅಡವಿಯ ನಡುವೆ ಇರ್ಪು ಫಾಲ್ಸ್ ಸೌಂದರ್ಯ ಸವಿಯುತ್ತಾ ಸಂಜೆ ಕಳೆದಿದ್ದ ಗೊತ್ತಾಗದ ಆ ಜೋಡಿ ಸಾರಿಗೆ ಸೌಕರ್ಯವಿಲ್ಲದೆ ರಾತ್ರಿ ಆಸರೆಗಾಗಿ ಕುಸುಮ ಮನೆ ಬಳಿ ಬಂದಿತ್ತು.

**"ರಾಮ್‌ಕಾಡ್ ಎಸ್ಟೇಟ್ ಸ್ಟೇ"** : ಇತ್ತ ಕುಸುಮಾಗೆ ಮಾತ್ರ ನಿದ್ದೆ ಬರಲಿಲ್ಲ. ಕಾಫಿ ದರ ಕುಸಿತದಿಂದ ಬದುಕುವುದು ಹೇಗೆಂದು ಚಿಂತಿಸುತ್ತಿದ್ದಾಗ ಥಟ್ಟನೆ ಯುವಜೋಡಿಯ ನೆನಪಾಯಿತು. ಇವತ್ತು ನೀಡದ ಆತಿಥ್ಯವನ್ನು ಬಿಸ್‌ನೆಸ್ ಆಗಿ ಯಾಕೆ ಬಳಸಿಕೊಳ್ಳಬಾರದೆಂದು ಲೆಕ್ಕ ಹಾಕಿದರು. ಇರ್ಪು ಫಾಲ್ಸ್‌ಗೆ ಬರುವ ಪ್ರವಾಸಿಗರನ್ನು ಮನೆಯಲ್ಲೇ ಉಳಿಸಿ ಊಟೋಪಚಾರ ಕೊಟ್ಟು ಒಂದಷ್ಟು ದರ ವಿಧಿಸಿದರೇ ಹೇಗೆ ಎಂದುಕೊಳ್ಳುತ್ತಲೇ ನಿದ್ದೆಗೆ ಜಾರಿದರು.

ಬೆಳಿಗ್ಗೆ ಎದ್ದವರೆ ಆ ಜೋಡಿಗೆ ತಿಂಡಿ ಕೊಟ್ಟು ಕಳುಹಿಸಿದರು. ರಾತ್ರಿ ಹೊಳೆದ ಐಡಿಯಾ ಬಗ್ಗೆ ಪತಿಯಲ್ಲಿ ಪ್ರಸ್ತಾಪಿಸಿದರು. ಇಬ್ಬರೂ ಮನೆಯ ಮಹಡಿಯಲ್ಲಿದ್ದ ಎರಡು ಕೊಠಡಿಗೆ ಸುಣ್ಣಬಣ್ಣ ಬಳಿದು ಸಿದ್ಧಪಡಿಸಿದರು. ಗೇಟ್‌ನಲ್ಲಿ "ರಾಮ್‌ಕಾಡ್ ಎಸ್ಟೇಟ್ ಸ್ಟೇ' ಎಂದು ಬೋರ್ಡ್ ನೇತು ಹಾಕಿಯೇ ಬಿಟ್ಟರು. ಮುಂದಿನ ವಿಕೆಂಡ್‌ನಲ್ಲಿ ಪ್ರವಾಸಿಗರು ಬಂದು ಉಳಿದುಕೊಂಡರು. ಒಂದಷ್ಟು ದುಡ್ಡು ಬಂತು, ಲೈಫ್ ಸೆಟಲ್ ಆಯಿತು. ನಂತರದ್ದು.. ಇತಿಹಾಸ! ಈಗ ಕೊಡಗಿನ ಮನೆ ಮನೆಯಲ್ಲೂ "ಹೋಂ ಸ್ಟೇ" ಆರಂಭವಾಗಿದೆ. ಇದರಿಂದ ಸಾವಿರಾರು ಮಂದಿ ಉದ್ಯೋಗ ಕಂಡುಕೊಂಡಿದ್ದಾರೆ. ■





# ನೂತನ ಸಹಕಾರ ಸಚಿವ ಶ್ರೀ ಹೆಚ್.ಎಸ್.ಮಹದೇವಪ್ರಸಾದ್



ನೂತನ ಸರಕಾರದಲ್ಲಿ ಸಹಕಾರ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿರುವ ಶ್ರೀ ಮಹದೇವಪ್ರಸಾದರವರು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟ ತಾಲ್ಲೂಕಿನ ಹಾಲಹಳ್ಳಿ ಗ್ರಾಮದವರು. 05–08–1958 ರಲ್ಲಿ ಜನನ. ವೃತ್ತಿಯಲ್ಲಿ ಕೃಷಿಕರು. ರಾಜ್ಯಶಾಸ್ತ್ರದಲ್ಲಿ ಎಮ್.ಎ ಪಧವಿಧರಾದ ಶ್ರೀಯುತರು ಗುಂಡ್ಲುಪೇಟೆಯಿಂದ ವಿಧಾನಸಭೆಗೆ ಆಯ್ಕೆಯಾಗಿದ್ದಾರೆ.

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಉಪಾಧ್ಯಕ್ಷರಾಗಿ 1990 ರಿಂದ 98 ರವರೆಗೆ ಸೇವೆ ಸಲ್ಲಿಸಿದ ಶ್ರೀಯುತರು 9,10,11,12 ನೇ ವಿಧಾನ ಸಭೆಗೆ ( 1994,1999,2004 ಮತ್ತು 2008) ರಲ್ಲಿ ಸತತವಾಗಿ ಆಯ್ಕೆಯಾದವರು. 1994 ರಿಂದ 1999 ರ ವರೆಗೆ ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಜ್ಞಾನಬುತ್ತಿ ಮೈಸೂರು (ಸ್ಪರ್ಧಾತ್ಮ ಪರಿಕ್ಷೆಗಳಿಗೆ ಉಚಿತವಾಗಿ ತರಬೇತಿ ನೀಡುತ್ತಿರುವ ಸಂಸ್ಥೆ) ಇದರ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ.

2004 ರಿಂದ 2007ರ ಎರಡು ಸಮ್ಮಿಶ್ರ ಸರಕಾರಗಳ ಅವಧಿಯಲ್ಲಿ ಆಹಾರ, ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳು, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿ ಕಾರ್ಯನಿರ್ವಹಿಸಿದ ಅನುಭವಿಗಳು.

ಸಹಕಾರ ಕ್ಷೇತ್ರದ ಮೂಲಕ ಗ್ರಾಮೀಣ ಜನರ, ಹಿಂದುಳಿದವರ ಆರ್ಥಿಕ ಅಭಿವೃದ್ಧಿ ಸಾಧ್ಯ ಎಂದು ನಂಬಿರುವ ಶ್ರೀಯುತರು ಸಹಕಾರ ಕ್ಷೇತ್ರದ ಸಾಧನೆ ಗಣನೀಯವಾದದ್ದು. ಸಹಕಾರ ಈ ದೇಶದ ಉತ್ತಮ ಅರ್ಥವ್ಯವಸ್ಥೆಯಾಗಿ ಬೆಳೆದಿದೆ. ಜನರ ಜೀವನ ಪದ್ಧತಿಯಾಗಿದೆ. ಸಹಕಾರ ಕ್ಷೇತ್ರಕ್ಕೆ ಸವಾಲುಗಳು ಸಾಕಷ್ಟಿವೆ. ಸವಾಲುಗಳನ್ನು ಎದುರಿಸಿ ಕಾರ್ಯನಿರ್ವಹಿಸಬೇಕಿದೆ. ಸಾಧಿಸಬೇಕಾದುದು ಸಾಕಷ್ಟಿದೆ. ಸಹಕಾರ ಕ್ಷೇತ್ರದ ಗುಣಮಟ್ಟ ಸುಧಾರಿಸುವುದು ಅಗತ್ಯ. ಸಾಂಪ್ರದಾಯಿಕ ವ್ಯವಹಾರಗಳ ಜೊತೆಗೆ ಆಧುನಿಕತೆಯನ್ನು ಹಾಗೂ ಹೊಸ ಹೊಸ ವ್ಯವಹಾರಗಳನ್ನು ತಾಂತ್ರಿಕತೆಯನ್ನು ಸಹಕಾರಿ ಸಂಸ್ಥೆಗಳು ಮೈಗೂಡಿಸಿಕೊಳ್ಳಬೇಕಿದೆ. ಯುವಕರು ಮಹಿಳೆಯರು ಈ ಕ್ಷೇತ್ರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಕ್ರೀಯವಾಗಿ ಭಾಗವಹಿಸುವಂತೆ ಮಾಡಬೇಕಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.



ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಸಚಿವರನ್ನು ಸಹಕಾರ ಸಂಸ್ಥೆಗಳ ಚುನಾವಣೆಗಳ ಬಗ್ಗೆ ಕೇಳಿದಾಗ ಸಚಿವರು ಸಹಕಾರ ಸಂಸ್ಥೆಗಳ ಚುನಾವಣೆಗಾಗಿ ಪ್ರತ್ಯೇಕ ಚುನಾವಣಾ ಆಯೋಗ ರಚನೆಯಾಗಿದೆ. ನಿಗಧಿತ ಸಮಯದಲ್ಲಿ ಸಹಕಾರಿ ಚುನಾವಣೆಗಳು ನಡೆಯುತ್ತವೆ ಯಾವುದೇ ಕಾರಣಕ್ಕೂ ಚುನಾವಣೆಗಳನ್ನು ಮುಂದೂಡಲು ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಜೂನ್ 2013

2ನೇ ತಂಡದದ ನಿರ್ದೇಶಕರ ಆಡಳಿತ ಪರಿಣತಿ ತರಬೇತಿ ಕಾರ್ಯಕ್ರಮ; ದಿನಾಂಕ : 24, 25. ಮೇ 2013

# ಸೌಹಾರ್ದ ಸಂಯುಕ್ತ ಸಹಕಾರಿಯು ನಿರ್ದೇಶಕರ ಆಡಳಿತ ಪರಿಣತಿ ತರಬೇತಿ ಕಾರ್ಯಾಗಾರ ನಡೆಸುತ್ತಿರುವುದು ಶ್ಲಾಘನೀಯ – ಎಸ್.ಎನ್. ಅರುಣ್‌ಕುಮಾರ್



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ 2013–14 ನೇ ಸಾಲಿನ ಎರಡನೇ ತಂಡದ ಪರಿಣಿತಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ 24 ಮತ್ತು 25 ಮೇ 2013ರಂದು ಬೆಂಗಳೂರಿನ ಪ್ರಾದೇಶಿಕ ಸಹಕಾರಿ ಆಡಳಿತ ನಿರ್ವಹಣಾ ತರಬೇತಿ ಸಂಸ್ಥೆಯಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಜಂಟಿ ನಿಬಂಧಕರಾದ ಶ್ರೀ ಎಸ್.ಎನ್. ಅರುಣ್ ಕುಮಾರ್ ಉದ್ಘಾಟಿಸಿದರು.

ತಮ್ಮ ಉದ್ಘಾಟನಾ ಭಾಷಣದಲ್ಲಿ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಹಲವಾರು ಉತ್ತಮ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲಿದೆ. ನಿರ್ದೇಶಕರಿಗಾಗಿ ಯಾವ ಸಂಸ್ಥೆಗಳೂ ಕೂಡ ತರಬೇತಿಗಳನ್ನು ನಡೆಸುವುದಿಲ್ಲ ಆದರೆ ಸಂಯುಕ್ತ ಸಹಕಾರಿಯು ಒಂದು ಉತ್ತಮ ಕಾರ್ಯಾಗಾರವನ್ನು ಏರ್ಪಡಿಸಿದೆ. ಸಹಕಾರಿಗಳು ಇವುಗಳ ಪೂರ್ಣ ಪ್ರಯೋಜನ ಪಡೆಯಬೇಕು ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಎಸ್. ಆರ್.ಸತೀಶ್‌ಚಂದ್ರರವರು ರಾಜ್ಯದ ಸೌಹಾರ್ದ ಸಹಕಾರಿಗಳು ಉತ್ತಮ ಗುಣಮಟ್ಟದ ಆಡಳಿತವನ್ನು ಮಾಡಲಿ, ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನ ಯುಗದ ಜೊತೆಗೆ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಲಿ ಎಂದು ಹಾರೈಸಿದರು. ರಾಜ್ಯಾದ್ಯಂತ ಅನೇಕ ತರಬೇತಿಗಳನ್ನು ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತಾ ಬಂದಿದೆ. ಸಹಕಾರಿಯ ಸಿಬ್ಬಂದಿಯವರಿಗೆ, ಅಧ್ಯಕ್ಷರಿಗೆ, ಆಡಳಿತ ಮಂಡಳಿಯ ನಿರ್ದೇಶಕರಿಗೆ ಹೀಗೆ ಒಟ್ಟು ಸಹಕಾರಿಯ ಏಳ್ಗೆಗಾಗಿ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ, ಸಹಕಾರಿಗಳು ಇದರ ಪ್ರಯೋಜನ ಪಡೆದು ಉತ್ತಮ ಹಾಗೂ ಮಾದರಿ ಸೌಹಾರ್ದ ಸಹಕಾರಿಗಳಾಗುವಂತೆ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ತರಬೇತಿ ಅಧಿಕಾರಿ ಶ್ರೀ ವಿ.ಜೆ ಕಾರಕೂನ್‌ರವರು ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ರಮೇಶ್‌ರವರು ಹಾಗೂ ಪ್ರಾದೇಶಿಕ ನಿರ್ವಹಣಾ ತರಬೇತಿ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕರಾದ ಶ್ರೀ ಗಣೇಶನ್‌ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಂಯುಕ್ತ ಸಹಕಾರಿಯ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ ಕುಮಾರ್‌ರವರು ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮದಲ್ಲಿ ಶ್ರೀ ಸಿ.ಎನ್.ಪರಶಿವಮೂರ್ತಿಯವರು 97ನೇ ಸಂವಿಧಾನ ತಿದ್ದುಪಡಿ ಆಧಾರಿತ ಸೌಹಾರ್ದ ಸಹಕಾರಿ ಕಾಯ್ದೆಯ ಪ್ರಮುಖ ಅಂಶಗಳು, ಶ್ರೀ ಬಿ.ಎ.ಮಹಾದೇವಪ್ಪರವರು ಸಹಕಾರಿ ಸಂಸ್ಥೆಗಳ ಗುಣಮಟ್ಟ ನಿರ್ವಹಣೆಯಲ್ಲಿ ನಿರ್ದೇಶಕರ ಪಾತ್ರ, ಡಾ.ಸಿದ್ಧಾಂತಿಯವರು ಸಹಕಾರ ಕ್ಷೇತ್ರದ ಇತ್ತೀಚಿನ ವಿದ್ಯಮಾನಗಳು, ಶ್ರೀ ಸುಭಾಷ್ ಹೆಗಡೆಯವರು ಪ್ಲಾನಿಂಗ್ ಮತ್ತು ಬಿಸಿನೆಸ್ ಡೆವೆಲಪ್‌ಮೆಂಟನಲ್ಲಿ ನಿರ್ದೇಶಕರ ಪಾತ್ರ, ಶ್ರೀ ಡಾ॥ ನಂದೀಶ್ ಹಿರೇಮಠ್‌ರವರು ನಾಯಕತ್ವದ ಪರಿಣಿತಿಯಲ್ಲಿ ವಿವಿಧ ಹಂತಗಳು ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ನೀಡಿದರು. ರಾಜ್ಯದ 27 ಸೌಹಾರ್ದ ಸಹಕಾರಿಗಳಿಂದ 36 ಜನರು ಭಾಗವಹಿಸಿದ್ದರು.







# ಬ್ಯಾಂಕಿಂಗ್ ಕ್ಷೇತ್ರದ ಮಾಹಿತಿಗಳಿಗಾಗಿ ಒಂದು ವೆಬ್‌ತಾಣ

## http://www.iba.org.in/

■ ರಘುನಂದನ ಕೆ.
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



ವಾಣಿಜ್ಯ ವಿಸ್ತಾರಗಳೇ ಪ್ರಮುಖವಾಗಿರುವ ಇಂದಿನ ದಿನಮಾನದಲ್ಲಿ ಹಣಕಾಸು ಕ್ಷೇತ್ರದ ವಿಷಯಗಳೇ ಮಹತ್ವವೆನಿಸಿವೆ. ಯಾವುದೇ ಸಂಗತಿ ಯಾ ಘಟನೆ ಹಣಕಾಸು ಕ್ಷೇತ್ರದ ಮೇಲೆ ಉಂಟು ಮಾಡುವ ಪರಿಣಾಮಗಳಿಗನುಗುಣವಾಗಿ ಮಹತ್ವ ಪಡೆಯುತ್ತಿದೆ. ಬ್ಯಾಂಕುಗಳು, ಸಹಕಾರ ಸಂಸ್ಥೆಗಳು ಹಣಕಾಸು ಕ್ಷೇತ್ರದಲ್ಲಿ ಉಂಟಾಗುವ ಬದಲಾವಣೆಗಳಿಗೆ ಸಂಬಂಧಿಸಿದಂತೆ ಹೆಚ್ಚು ಅರಿತಷ್ಟು ಕಾರ್ಯಾಚರಣೆ, ವ್ಯವಹಾರ ವಿಸ್ತರಣೆ ಸುಲಭವಾಗಲಿದೆ. ಸಧ್ಯ ದೇಶದಲ್ಲಿ ಸರ್ಕಾರಿ ಸ್ವಾಮ್ಯದ 26 ಮತ್ತು ಖಾಸಗಿ ಕ್ಷೇತ್ರದ 22 ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ ದೇಶದ ಶೇ.35ರಷ್ಟು ವಯಸ್ಕರು ಮಾತ್ರವೇ ಬ್ಯಾಂಕುಗಳಲ್ಲಿ ಮತ್ತು ಇತರೆ ಹಣಕಾಸು ಸೇವಾ ಸಂಸ್ಥೆಗಳಲ್ಲಿ ಖಾತೆ ಹೊಂದಿದ್ದಾರೆ ಎಂದು ಅಂದಾಜಿಸಲಾಗಿದೆ.

ಭಾರತೀಯ ಬ್ಯಾಂಕುಗಳ ಸಂಘ ಅಥವಾ ಇಂಡಿಯನ್ ಬ್ಯಾಂಕ್ಸ್ ಅಸೋಸಿಯೇಷನ್ – ಐಬಿಎ ಇದು ಭಾರತದ ಬ್ಯಾಂಕಿಂಗ್ ತತ್ವಗಳನ್ನು ಪ್ರಚುರಪಡಿಸುವ ನಿಟ್ಟಿನಲ್ಲಿ ಹಾಗೂ ಸೃಜನಶೀಲ ವೃತ್ತಿಪರ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಆರಂಭಿಕ ಉದ್ದೇಶದೊಂದಿಗೆ ಸೆಪ್ಟೆಂಬರ್ 26,1946ರಂದು ಸ್ಥಾಪಿಸಲ್ಪಟ್ಟ ಸಂಸ್ಥೆ. 22ಸದಸ್ಯ ಬ್ಯಾಂಕುಗಳೊಂದಿಗೆ ಆರಂಭಿಸಲ್ಪಟ್ಟ ಇದು ಖಾಸಗಿ ಕ್ಷೇತ್ರದ, ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು, ಭಾರತದಲ್ಲಿ ಕಾರ್ಯಾಚರಣೆಯನ್ನು ಹೊಂದಿರುವ ವಿದೇಶಿ ಬ್ಯಾಂಕುಗಳು ಹಾಗೂ ಪಟ್ಟಣ ಸಹಕಾರಿ ಬ್ಯಾಂಕುಗಳೂ ಸೇರಿದಂತೆ ಪ್ರಸ್ತುತ 173 ಸದಸ್ಯರನ್ನೊಳಗೊಂಡಿದೆ. ಬ್ಯಾಂಕಿಂಗ್ ಕ್ಷೇತ್ರದ ಅಪಾರ ಮಾಹಿತಿ ಹಾಗೂ ಪ್ರಸ್ತುತ ವಿದ್ಯಮಾನಗಳ ಬಗ್ಗೆ ಅರಿವುಂಟು ಮಾಡುವ ಈ ಸಂಸ್ಥೆಯ ವೆಬ್‌ತಾಣದ ಪರಿಚಯ ಇಲ್ಲಿದೆ.

**ವೆಬ್‌ತಾಣ 12 : http://www.iba.org.in/**

- ಐಬಿಎ ಇದರ ಸಂಕ್ಷಿಪ್ತ ಹಿನ್ನಲೆ, ಉದ್ದೇಶಗಳು, ವ್ಯವಸ್ಥಾಪನಾ ಮಂಡಳಿ ಹಾಗೂ ಸಂಘಟನಾ ಮಂಡಳಿಯ ವಿವರಗಳು, ಹಿಂದಿನ ಅಧ್ಯಕ್ಷರುಗಳ ವಿವರ, ಕಛೇರಿ ಸಂಪರ್ಕ ವಿವರಗಳನ್ನು ಈ ವೆಬ್‌ತಾಣದಲ್ಲಿ ನೋಡಬಹುದು.
- ಸದಸ್ಯತ್ವದ ಮಾಹಿತಿ, ಅರ್ಹತೆ, ಸರ್ಕಾರಿ ಸ್ವಾಮ್ಯದ ಬ್ಯಾಂಕು ಗಳು ಖಾಸಗಿ ಬ್ಯಾಂಕುಗಳು, ವಿದೇಶಿ ಬ್ಯಾಂಕುಗಳು, ಸಹಕಾರಿ ಬ್ಯಾಂಕು ಗಳು ಸೇರಿದಂತೆ ಸಾಮಾನ್ಯ ಸದಸ್ಯರ ವಿವರ, ಹಣಕಾಸು ಸಂಸ್ಥೆಗಳು, ರಾಜ್ಯಮಟ್ಟದ, ಜಿಲ್ಲಾಮಟ್ಟದ ಸಹಕಾರ ಸಂಸ್ಥೆಗಳು ಸೇರಿದಂತೆ ಸಹಸದ್ಯರ ವಿವರಗಳನ್ನು – ಅವುಗಳ ಸಂಪರ್ಕ ಮಾಹಿತಿಗಳೊಂದಿಗೆ ಪಡೆಯಬಹುದು.
- ಮಹತ್ವದ ಹಾಗೂ ಹಣಕಾಸು ವೆಬ್ ತಾಣಗಳ ಸಂಪರ್ಕ ಕೊಂಡಿ, ಪ್ರಸಕ್ತ ಬ್ಯಾಂಕಿಂಗ್ ವಿದ್ಯಮಾನಗಳ ಯಾ ಘಟನೆಗಳ ವಿವರಗಳು, ಆನ್‌ಲೈನ್ ವ್ಯವಹಾರದ ಸುರಕ್ಷತಾ ಕ್ರಮಗಳು ಸೇರಿದಂತೆ ಸದಸ್ಯರ ಶಿಕ್ಷಣಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ನೋಡಬಹುದು.
- ರಿಟೈಲ್ ಬ್ಯಾಂಕಿಂಗ್ ವ್ಯವಹಾರಕ್ಕೆ ಸಂಬಂಧಿಸಿದ ಕೆವೈಸಿ ನಾರ್ಮ್ಸ್, ಆನ್‌ಲೈನ್ ತೆರಿಗೆ ಲೆಕ್ಕಾಚಾರದ ವಿಧಾನ, ತೆರಿಗೆ & ಸೇವಾ ತೆರಿಗೆಗೆ ಸಂಬಂಧಿಸಿದಂತೆ ವಿದ್ಯುನ್ಮಾನ ಲೆಕ್ಕಪತ್ರ ನಿರ್ವಹಣಾ ವಿಧಾನ, ಬ್ಯಾಂಕಿಂಗ್ ಮಾನದಂಡಗಳ ವಿವರಗಳು, ಆರ್‌ಟಿಜಿಎಸ್, ಎನ್‌ಇಎಫ್‌ಟಿ ಸೇರಿದಂತೆ ವಿವಿಧ ಪಾವತಿ ವಿಧಾನಗಳ ವಿವರವಾದ ಮಾಹಿತಿಗಳನ್ನು ಈ ವೆಬ್‌ತಾಣದಿಂದ ಪಡೆಯಬಹುದು.
- ಸಾಮಾಜಿಕ ಬ್ಯಾಂಕಿಂಗ್‌ಗೆ ಸಂಬಂಧಿಸಿದಂತೆ ಸಣ್ಣ & ಮಧ್ಯಮ ಉಧ್ಯಮಗಳ ಮಾಹಿತಿ, ಸರ್ಕಾರದಿಂದ ಪ್ರಾಯೋಜಿಸಲ್ಪಟ್ಟ ಯೋಜನೆಗಳ ಮಾಹಿತಿ, ಶೈಕ್ಷಣಿಕ ಸಾಲದ ಮಾಹಿತಿಗಳನ್ನು ಈ ತಾಣದಲ್ಲಿ ನೋಡಬಹುದು.
- ಸಗಟು ವ್ಯಾಪಾರದ (ವ್ಹೋಲ್‌ಸೇಲ್) ಬ್ಯಾಂಕಿಂಗ್‌ಗೆ ಸಂಬಂಧಿಸಿದಂತೆ ಕಾರ್ಪೋರೇಟ್ ಆಡಳಿತ, ಪಿಎಲ್‌ಆರ್ ಮಾನದಂಡಗಳು, ಭದ್ರತಾ ಕಾನೂನುಗಳು ಇತ್ಯಾದಿಗಳ ಮಾಹಿತಿಯನ್ನು ಪಡೆಯಬಹುದು.
- ಕಾನೂನು ವಿಷಯಗಳಿಗೆ ಸಂಬಂಧಿಸಿದಂತೆ ಬ್ಯಾಂಕುಗಳ ಸ್ವಾಧೀನ ಮತ್ತು ವಿಲೀನ ಪ್ರಕ್ರಿಯೆಯ ಮಾಹಿತಿಗಳು, ಬ್ಯಾಂಕಿಂಗ್ ಕಾಯ್ದೆಯ ಸುಧಾರಣಾ ನೀತಿಯ ಮಾಹಿತಿ, ಮಾಹಿತಿ ಹಕ್ಕು ಕಾಯ್ದೆಯ ವಿಷಯಗಳನ್ನು ನೋಡಬಹುದು.
- ಸಾರ್ವಜನಿಕ ಹಾಗೂ ಖಾಸಗಿ ವಲಯದ ಬ್ಯಾಂಕುಗಳ, ಭಾರತದಲ್ಲಿ ಕಾರ್ಯಾಚರಣೆ ಹೊಂದಿರುವ ವಿದೇಶಿ ಬ್ಯಾಂಕುಗಳ ಅಂಕಿ ಅಂಶಗಳ ಮಾಹಿತಿಯನ್ನು, ವಿವಿಧ ಸುತ್ತೋಲೆಗಳನ್ನು, ಠೇವಣಿ ಹಾಗೂ ಸಾಲಗಳಿಗೆ ಸಂಬಂಧಿಸಿದ ಮಾಸ್ಟರ್ ಚಾರ್ಟ್‌ಗಳನ್ನು ಈ ತಾಣದಲ್ಲಿ ಪಡೆಯಬಹುದು.
- ಬ್ಯಾಂಕುಗಳಿಗೆ ಸಂಬಂಧಿಸಿದ ಸೆಮಿನಾರುಗಳ ಮಾಹಿತಿ, ವಿವಿಧ ಪ್ರಕಟಣೆಗಳ ಮಾಹಿತಿಗಳಲ್ಲದೆ ಅನೇಕ ಪೂರಕ ಮಾಹಿತಿಗಳನ್ನು, ಗ್ರಾಹಕ ಸೇವಾಕೇಂದ್ರದ ಮಾಹಿತಿ ವಿವರಗಳನ್ನು ಕೂಡ ಪಡೆಯಬಹುದಾಗಿದೆ.

ಹಣಕಾಸು ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಾಗೂ ಬ್ಯಾಂಕಿಂಗ್ ಕ್ಷೇತ್ರದ ವಿದ್ಯಮಾನಗಳ ಕುರಿತಂತೆ ಎಷ್ಟು ಮಾಹಿತಿ ದೊರೆತಾಗ್ಯೂ ಇನ್ನೂ ಒಂದಿಷ್ಟು ತಿಳಿಯುವುದು ಉಳಿದಿರುತ್ತದೆ. ತಂತ್ರಜ್ಞಾನ ನಮಗೆ ಅಗತ್ಯ ಮಾಹಿತಿ ಒದಗಿಸಿಕೊಡುವ ಮಾಧ್ಯಮ ಮಾತ್ರವೇ ಆಗಿದ್ದು ಆ ಮಾಹಿತಿಗಳನ್ನು ಅಗತ್ಯಕ್ಕೆ ತಕ್ಕಂತೆ ಉಪಯೋಗಿಸುವುದು ನಮ್ಮದೇ ಜವಾಬ್ದಾರಿ. ಬ್ಯಾಂಕಿಂಗ್ ಕ್ಷೇತ್ರದ ಅಮೂಲ್ಯ ಮಾಹಿತಿಗಳನ್ನು ಅರಿಯಲು ಆರ್‌ಬಿಐನ ವೆಬ್‌ತಾಣದ ಜೊತೆಗೆ ಇಂಡಿಯನ್ ಬ್ಯಾಂಕ್ಸ್ ಅಸೋಸಿಯೇಷನ್ – ಐಬಿಎ ವೆಬ್‌ತಾಣವನ್ನು ಕೂಡ ಗಮನಿಸಬಹುದು. ■

## ಆರ್ಥಿಕ ಮಾಹಿತಿ

ದಿ : 25.04.2013ರ ಸುತ್ತೋಲೆಯ ಮೂಲಕ ಪ್ರತಿಯೊಂದು ಸಹಕಾರಿಯು 31.03.2013ಕ್ಕೆ ಇರುವಂತೆ ಸಹಕಾರಿಯ ಆರ್ಥಿಕ ಮಾಹಿತಿಯನ್ನು ದಿನಾಂಕ 20.05.2013ರೊಳಗೆ ಸಂಯುಕ್ತ ಸಹಕಾರಿಯನ್ನು ತಲುಪುವಂತೆ ಕಳುಹಿಸಲು ಸೂಚಿಸಲಾಗಿತ್ತು. ಆದರೆ ಕೆಲವು ಸಹಕಾರಿಗಳು ಇದುವರೆಗೂ ಈ ಮಾಹಿತಿಯನ್ನು ಕಳುಹಿಸಿರುವುದಿಲ್ಲ. ಇದುವರೆಗೂ ಕಳುಹಿಸಿರದ ಸಹಕಾರಿಗಳು ಲೆಕ್ಕಪರಿಶೋಧನೆಗೆ ಕಾಯದೇ ದಿ : 20.06.2013ರೊಳಗೆ ತಲುಪುವಂತೆ ಮಾಹಿತಿಯನ್ನು ಕಳುಹಿಸಲು ಮತ್ತೊಮ್ಮೆ ಸೂಚಿಸಿದೆ. ತಪ್ಪಿದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂಬುದನ್ನು ಸಹಕಾರಿಗಳ ಗಮನಕ್ಕೆ ತರಲಾಗಿದೆ.

## ಶಾಖೆಗಳ ಮಾಹಿತಿ

ದಿನಾಂಕ 01.03.2013ರ ಸುತ್ತೋಲೆಯ ಮೂಲಕ ಪ್ರತಿಯೊಂದು ಸಹಕಾರಿಯು 11.02.2013ಕ್ಕೆ ಇರುವಂತೆ ಸಹಕಾರಿಯ ಶಾಖೆಗಳ ಮಾಹಿತಿಯನ್ನು ದಿ : 15.03.2013ರೊಳಗೆ ಸಂಯುಕ್ತ ಸಹಕಾರಿಯನ್ನು ತಲುಪುವಂತೆ ಕಳುಹಿಸಲು ಸೂಚಿಸಲಾಗಿತ್ತು. ಆದರೆ ಕೆಲವು ಸಹಕಾರಿಗಳು ಇದುವರೆಗೂ ಈ ಮಾಹಿತಿಯನ್ನು ಕಳುಹಿಸಿರುವುದಿಲ್ಲ. ಇದುವರೆಗೂ ಕಳುಹಿಸಿರದ ಸಹಕಾರಿಗಳು ದಿ : 20.06.2013ರೊಳಗೆ ತಲುಪುವಂತೆ ಮಾಹಿತಿಯನ್ನು ಕಳುಹಿಸಲು ಮತ್ತೊಮ್ಮೆ ಸೂಚಿಸಿದೆ. ತಪ್ಪಿದಲ್ಲಿ ಅಂತಹ ಸಹಕಾರಿಯ ಶಾಖೆಗಳನ್ನು ಅನಧಿಕೃತ ಶಾಖೆಗಳೆಂದು ಪರಿಗಣಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂಬುದನ್ನು ಸಹಕಾರಿಗಳ ಗಮನಕ್ಕೆ ತರಲಾಗಿದೆ.

## ಚುನಾವಣಾ ಮಾಹಿತಿ

ದಿ : 17.05.2013ರ ಸುತ್ತೋಲೆಯ ಮೂಲಕ ಪ್ರತಿಯೊಂದು ಸಹಕಾರಿಯು ತಮ್ಮ ಸಹಕಾರಿಯ ಮಂಡಲಿಯ/ಪದಾಧಿಕಾರಿಗಳ ಚುನಾವಣೆಗೆ ಸಂಬಂಧಿಸಿದ ಮಾಹಿತಿಯನ್ನು ದಿನಾಂಕ 25.05.2013ರೊಳಗೆ ತಲುಪುವಂತೆ ಕಳುಹಿಸಲು ಸೂಚಿಸಲಾಗಿತ್ತು. ಪ್ರಸ್ತುತ ಚುನಾವಣಾ ಆಯೋಗ ರಚನೆಯಾಗಿದ್ದು, ಆಯೋಗಕ್ಕೆ ಮಾಹಿತಿಯನ್ನು ನೀಡಬೇಕಿರುತ್ತದೆ. ಆದ್ದರಿಂದ ಈ ಮಾಹಿತಿಯು ಅತ್ಯಂತ ಅವಶ್ಯಕವಾಗಿರುತ್ತದೆ. ಆದರೆ ಕೆಲವು ಸಹಕಾರಿಗಳು ಇದುವರೆಗೂ ಈ ಮಾಹಿತಿಯನ್ನು ಕಳುಹಿಸಿರುವುದಿಲ್ಲ. ಅಂತಹ ಸಹಕಾರಿಗಳು ದಿನಾಂಕ 20.06.2013ರೊಳಗೆ ತಲುಪುವಂತೆ ಮಾಹಿತಿಯನ್ನು ಕಳುಹಿಸಲು ಮತ್ತೊಮ್ಮೆ ಸೂಚಿಸಿದೆ. ತಪ್ಪಿದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂಬುದನ್ನು ಸಹಕಾರಿಗಳ ಗಮನಕ್ಕೆ ತರಲಾಗಿದೆ.

## ಸೌಹಾರ್ದ ಸಹಕಾರಿಗಳ ಗಮನಕ್ಕೆ

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕರಡು ನಿಯಮಗಳನ್ನು ದಿ:28 ಮೇ 2013ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ್ದು ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಈ ನಿಯಮಗಳು ನೇರವಾಗಿ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಅನ್ವಯವಾಗುವುದರಿಂದ ಸೌಹಾರ್ದ ಸಹಕಾರಿಗಳು ಈ ನಿಯಮಗಳ ಅಧ್ಯಯನ ಮಾಡಿ ಯಾವುದೇ ಆಕ್ಷೇಪಣೆ, ಸಲಹೆ, ತಿದ್ದುಪಡಿಗಳಿದ್ದಲ್ಲಿ ದಿ:27 ಜೂನ್ 2013ರೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಸಲ್ಲಿಸಲು ಸೂಚಿಸಿದೆ.

**ಆಕ್ಷೇಪಣೆಗಳನ್ನು ಕಳುಹಿಸಬೇಕಾದ ವಿಳಾಸ :** ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬಹು ಮಹಡಿ ಕಟ್ಟಡ, ಬೆಂಗಳೂರು – 560001. ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕರಡು ನಿಯಮಗಳನ್ನು ಸಂಯುಕ್ತ ಸಹಕಾರಿಯ ವೆಬ್‌ತಾಣ : www.soharda.coopನಲ್ಲಿ ಒದಗಿಸಲಾಗಿದ್ದು ಸೌಹಾರ್ದ ಸಹಕಾರಿಗಳು ಗಮನಿಸಲು ಸೂಚಿಸಿದೆ.

## ಸೌಹಾರ್ದ ಸಹಕಾರಿಗಳ ಗಮನಕ್ಕೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಿಂದ ಇ-ಸ್ಟಾಂಪಿಗ್ ಸೌಲಭ್ಯ ಹೊಂದಿರುವ ಸೌಹಾರ್ದ ಸಹಕಾರಿಗಳಿಗೆ ಪ್ರಿಂಟಿಂಗ್ ಕಾಟ್ರೇಜ್‌ನ್ನು ಹೆಚ್‌ಪಿ ಕಂಪನಿಯೊಂದಿಗೆ ದಿನಾಂಕ 01.06.2013 ರಿಂದ 2 ವರ್ಷರವರೆಗೆ ಒಪ್ಪಂದ ಮಾಡಿಕೊಂಡು ಖರೀದಿಸಲು ಅವಕಾಶ ಮಾಡಿಕೊಟ್ಟಿರುತ್ತದೆ. ಕಾಟ್ರೇಜ್‌ನ ಬೆಲೆ ಹಾಗೂ ಹೆಸರನ್ನು ಈ ಕೆಳಗೆ ತಿಳಿಸಲಾಗಿದೆ. ಹಾಗೂ ಖರೀದಿಸಿದ ಸೌಹಾರ್ದ ಸಹಕಾರಿಗಳಿಗೆ ಕಾಟ್ರೇಜ್‌ನ್ನು ಪ್ರತಿ ತಿಂಗಳ ಮೊದಲ ವಾರದಂದು ಹೆಚ್‌ಪಿ ಕಂಪನಿಯವರು ವಿಲೇವಾರಿ ಮಾಡುತ್ತಾರೆ. ಕಾಟ್ರೇಜ್‌ನ್ನು-printercartridge@souharda.coop. 2055ಡಿ ಮಾಡೆಲ್ ರೂ 4330.00, 401ಡಿ ಮಾಡೆಲ್ ರೂ.4800.00

## ವಾಹನ ಚಾಲಕರು ಬೇಕಾಗಿದ್ದಾರೆ

ಸಂಯುಕ್ತ ಸಹಕಾರಿಯ ವಾಹನವನ್ನು ಚಾಲನೆ ಮಾಡಲು ನುರಿತ ಚಾಲಕರು ಬೇಕಾಗಿದ್ದಾರೆ. ಎಸ್.ಎಸ್.ಎಲ್.ಸಿ.ವರೆಗೆ ವಿದ್ಯಾರ್ಹತೆ ಇರಬೇಕು ಮತ್ತು ಲಘು ಮೋಟಾರು ವಾಹನ ಚಾಲನ ಪರವಾನಗಿ ಹೊಂದಿರಬೇಕು. ಕನಿಷ್ಠ ಮೂರು ವರ್ಷಗಳ ಅನುಭವ ಹೊಂದಿರಬೇಕು. ಆಸಕ್ತರು ತಮ್ಮ ಸ್ವವಿವರವನ್ನು ದಿನಾಂಕ 25.06.2013ರೊಳಗೆ ಸಂಯುಕ್ತ ಸಹಕರಿಯ ಕಛೇರಿಗೆ ಸಲ್ಲಿಸಲು ಸೂಚಿಸಿದೆ.







## ಶಾಖಾ ಪ್ರಾರಂಭೋತ್ಸವ – ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿ ನಿ.,



ಬೆಂಗಳೂರಿನಲ್ಲಿ ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿಯ ಪ್ರಾರಂಭೋತ್ಸವ ಸಮಾರಂಭದ ದಿವ್ಯ ಸಾನಿಧ್ಯವಹಿಸಿ ಆಶೀರ್ವಚನ ಮಾಡಿದ ಜಗದ್ಗುರು ಶ್ರೀ ಶ್ರೀ ಶ್ರೀ ಸುರೇಶ್ವರಾನಂಧ ಭಾರತೀ ಮಹಾಸ್ವಾಮೀಜಿಯವರು ಪ್ರಾಮುಖ್ಯವಾಗಿ ಮರಾಠ ಸಮುದಾಯದವರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ಜನಾಂಗದವಿಗೆ ನೆರವು ನೀಡಲು ಶ್ರೀ ಶಿವಾಜಿ ಮಹಾರಾಜರ ಹೆಸರಿನಲ್ಲಿ ಒಂದು ಸೌಹಾರ್ದ ಸಹಕಾರಿಯನ್ನು ಸ್ಥಾಪಿಸಿ ಬೆಂಗಳೂರು ನಗರದ ಜನತೆಗೆ ಸೇವೆ ಸಲ್ಲಿಸಲು ಶಾಖೆಯನ್ನು ಪ್ರಾರಂಭಿಸುತ್ತಿರುವು ನಿಜಕ್ಕೂ ಅಭಿನಂದನೀಯವೆಂದು ಹೇಳಿ ಶುಭ ಕೋರಿದರು.

ಈ ಸಂದರ್ಭದಲ್ಲಿ ಗಣಕಯಂತ್ರಗಳಿಗೆ ಚಾಲನೆ ನೀಡಿ ಮಾತನಾಡಿದ ಗೌರವಾನ್ವಿತ ಅತಿಥಿ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಎಸ್.ಆರ್. ಸತೀಶ್ಚಂದ್ರರವರು ಮಾತನಾಡಿ ಛತ್ರಪತಿ ಶಿವಾಜಿ ಯಾವುದೇ ಜನಾಂಗಕ್ಕೆ ಸೀಮಿತವಾಗಿರದೆ ರಾಷ್ಟ್ರದ ಉನ್ನತ ವ್ಯಕ್ತಿ ಹಾಗೂ ಉದಾತ್ತಗುಣಗಳು ಮತ್ತು ದೇಶಭಕ್ತಿಯಿಂದ ಸ್ಮರಣೀಯರಾದವರೆಂದು ಹೇಳಿ ಶಾಖೆಗೆ ಶುಭಕೋರಿದರು. ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರ, ನಿರ್ದೇಶಕ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಹಾಗೂ ತುಮಕೂರಿನ ಸನ್ನದು ಲೆಕ್ಕಪರಿಶೋಧಕ ಶ್ರೀ ಎಂ.ವಿ.ರಾಮಚಂದ್ರ, ಮರಾಠ ಸಮಾಜದ ಮುಖಂಡರುಗಳಾದ ಶ್ರೀ ಶಾಮಸುಂದರ್ ಗಾಯಕ್‌ವಾಡ್, ಮರಾಠ ಧ್ವನಿ ಮಾಸಪತ್ರಿಕೆಯ ಸಂಪಾದಕ ವಿ.ಕೆ.ಪವಾರ್, ಚಾಮರಾಜಪೇಟೆಯ ಕಾರ್ಪೊರೇಟರ್ ಗಣೇಶ್ ಮುಂತಾದವರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿ ಉಪಾಧ್ಯಕ್ಷ ಶ್ರೀ ಟಿ.ಆರ್. ಮದನಮೋಹನ್‌ರಾವ್ ಸ್ವಾಗತಿಸಿದರು. ಪತ್ತಿನ ಸಹಕಾರಿಯ ವ್ಯವಸ್ಥಾಪಕ ಶ್ರೀ ಜಿ.ಎನ್.ಶಂಕರನಾರಾಯಣ್‌ರವರು ಸಹಕಾರಿ ನಡೆದುಬಂದ ದಾರಿಯ ಹಾಗೂ ಪ್ರಗತಿಯ ಚಿತ್ರಣವನ್ನು ವರದಿವಾಚನ ಮೂಲಕ ಸಭೆಯಲ್ಲಿ ಮಂಡಿಸಿದರು. ಕೊನೆಯಲ್ಲಿ ಶ್ರೀ ಮದನಮೋಹನ್ ರಾವ್‌ರವರು ಎಲ್ಲರನ್ನು ವಂದಿಸಿದರು.

## ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತಕ್ಕೆ ಭೇಟಿ



ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಹಂಕ ಉಪನಗರ, ಬೆಂಗಳೂರು ಇಲ್ಲಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ಮತ್ತು ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ.ಕುಮಾರ್‌ರವರು ದಿ : 25/05/2013ರಂದು ಭೇಟಿ ನೀಡಿ ಸಹಕಾರಿಯ ಕಾರ್ಯವೈಖರಿ ಮತ್ತು ಪ್ರಗತಿಯನ್ನು ಪರಿಶೀಲಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಅಧ್ಯಕ್ಷರಾದ ಶ್ರೀ ಎಮ್.ಮುನಿರೆಡ್ಡಿಯವರು, ಉಪಾಧ್ಯಕ್ಷರಾದ ಶ್ರೀ ಎನ್.ವೇಮಾರೆಡ್ಡಿಯವರು ಮತ್ತು ನಿರ್ದೇಶಕರು ಉಪಸ್ಥಿತರಿದ್ದರು.


# ಸಂಯುಕ್ತ ಸಹಕಾರಿಯ ಅಭಿನಂದನೆಗಳು

ಸ್ವಾಭಿಮಾನಿ ಸಹಕಾರಿ

ನೂತನ ಮಂತ್ರಿಮಂಡಳದ ಎಲ್ಲಾ ಸದಸ್ಯರಿಗೆ, ಹಿರಿಯ ಸಹಕಾರಿಗಳು ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್, ಉನ್ನತ ಶಿಕ್ಷಣ ಸಚಿವರಾದ ಶ್ರೀ ಆರ್.ವಿ.ದೇಶಪಾಂಡೆ ಅವರಿಗೆ ಅಭಿನಂದನೆಗಳು – ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಡಳಿತ ಮಂಡಳಿ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು


ಶ್ರೀ ಕೆ.ಜೆ.ಜಾರ್ಜ್
ಮಾನ್ಯ ಗೃಹ ಸಚಿವರು


ಶ್ರೀ ಎಚ್.ಕೆ. ಪಾಟೀಲ್
ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತರಾಜ್


ಶ್ರೀ ಎಚ್.ಎಸ್.ಮಹಾದೇವ ಪ್ರಸಾದ್
ಮಾನ್ಯ ಸಹಕಾರ ಸಚಿವರು




ಶ್ರೀ ಆರ್.ವಿ.ದೇಶಪಾಂಡೆ
ಮಾನ್ಯ ಉನ್ನತ ಶಿಕ್ಷಣ ಸಚಿವರು


ಶ್ರೀ ಎಸ್.ಆರ್.ಪಾಟೀಲ್
ಮಾನ್ಯ ಮಾಹಿತಿ ತಂತ್ರಜ್ಞಾನ ಸಚಿವರು


ಶ್ರೀ ರಾಮಲಿಂಗರೆಡ್ಡಿ
ಮಾನ್ಯ ಸಾರಿಗೆ ಸಚಿವರು


ಶ್ರೀ ಖಮರುಲ್ ಇಸ್ಲಾಂ
ಮಾನ್ಯ ವಕ್ಫ್ ಸಚಿವರು


ಶ್ರೀ ಶಾಮನೂರು ಶಿವಶಂಕರಪ್ಪ
ಮಾನ್ಯ ತೋಟಗಾರಿಕೆ ಸಚಿವರು


ಶ್ರೀ ಶ್ರೀನಿವಾಸ್ ಪ್ರಸಾದ್
ಮಾನ್ಯ ಕಂದಾಯ ಸಚಿವರು


ಶ್ರೀ ಅಂಬರೀಷ್
ಮಾನ್ಯ ವಸತಿ ಸಚಿವರು


ರಾಜ್ಯ ಸಚಿವರು


ಶ್ರೀ ಟಿ.ಬಿ. ಜಯಚಂದ್ರ
ಮಾನ್ಯ ಕಾನೂನು ಸಚಿವರು


ಶ್ರೀ ಬಿ.ರಮಾನಾಥರೈ
ಮಾನ್ಯ ಅರಣ್ಯ ಸಚಿವರು


ಶ್ರೀ ಪ್ರಕಾಶ್ ಹುಕ್ಕೇರಿ
ಮಾನ್ಯ ಮುಜರಾಯಿ ಸಚಿವರು


ಶ್ರೀ ವಿನಯ್ ಕುಮಾರ್ ಸೊರಕೆ
ಮಾನ್ಯ ನಗಾರಾಭಿವೃದ್ಧಿ ಸಚಿವರು


ಶ್ರೀ ಶಿವರಾಜ ತಂಗಡಗಿ
ಮಾನ್ಯ ಸಣ್ಣ ನೀರಾವರಿ ಸಚಿವರು



ಡಾ. ಎಚ್.ಸಿ.ಮಹದೇವಪ್ಪ
ಮಾನ್ಯ ಲೋಕೋಪಯೋಗಿ ಸಚಿವರು


ಶ್ರೀ ಬಾಬುರಾವ್ ಚಿಂಚನಸೂರು
ಮಾನ್ಯ ಜವಳಿ ಸಚಿವರು


ಶ್ರೀ ಎಚ್.ಆಂಜನೇಯ
ಮಾನ್ಯ ಸಮಾಜ ಕಲ್ಯಾಣ ಸಚಿವರು


ಶ್ರೀ ಸತೀಶ್ ಜಾರಕಿಹೊಳಿ
ಮಾನ್ಯ ಅಬಕಾರಿ ಸಚಿವರು


ಶ್ರೀ ಎಂ.ಬಿ.ಪಾಟೀಲ್
ಮಾನ್ಯ ಜನಸಂಪನ್ಮೂಲ ಸಚಿವರು


ಶ್ರೀ ಅಭಯಚಂದ್ರ ಜೈನ್
ಮಾನ್ಯ ಯುವಜನ ಮತ್ತು ಮೀನುಗಾರಿಕೆ ಸಚಿವರು


ಶ್ರೀ ದಿನೇಶ್ ಗುಂಡೂರಾವ್
ಮಾನ್ಯ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರು


ಶ್ರೀ ಕೃಷ್ಣ ಭೈರೇಗೌಡ
ಮಾನ್ಯ ಕೃಷಿ ಸಚಿವರು


ಡಾ ಶರಣಪ್ರಕಾಶ್ ಪಾಟೀಲ್
ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು


ಶ್ರೀ ಕಿಮ್ಮನೆ ರತ್ನಾಕರ
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು


ಶ್ರೀಮತಿ ಉಮಾಶ್ರೀ
ಮಾನ್ಯ ಮಹಿಳಾ, ಮಕ್ಕಳ ಕಲ್ಯಾಣ ಸಚಿವರು


ಶ್ರೀ ಸಂತೋಷ್ ಲಾಡ್
ಮಾನ್ಯ ಸಂಪನ್ಮೂಲ ಅಭಿವೃದ್ಧಿ ಸಚಿವರು


ಶ್ರೀ ಪಿ.ಟಿ.ಪರಮೇಶ್ವರ ನಾಯಕ್
ಮಾನ್ಯ ಕಾರ್ಮಿಕ ಸಚಿವರು


ಶ್ರೀ ಯು.ಟಿ.ಖಾದರ್
ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಸಚಿವರು